ವ್ಯಕ್ತಿ ಚಿತ್ರಣ

ಸಂಗೀತ ಕಲಾನಿಧಿ

# ಪದ್ಮವಿಭೂಷಣ ಡಿ.ಕೆ. ಪಟ್ಟಮ್ಮಾಳ್



● ಡಾ|| ಎಸ್.ಸಿ. ಶರ್ಮ

ವ್ಯಕ್ತಿ ಚಿತ್ರಣ

ಕರ್ನಾಟಕ ಸರ್ಕಾರ

# ಸಂಗೀತ ಕಲಾನಿಧಿ
# ಪದ್ಮವಿಭೂಷಣ ಡಿ.ಕೆ. ಪಟ್ಟಮ್ಮಾಳ್

ಡಾ|| ಎಸ್.ಸಿ. ಶರ್ಮ

ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

**Sangeeta Kalanidhi**
**Padmabhushana D.K. Pattammal**
*by* **S.C. Sharma**

*Published by*
**T.G. Narasimha Moorthy**
Registrar
**Karnataka Sangeeta Nritya Academy**
Kannada Bhavan, J.C. Road, Bangalore
Ph. : 080-22215072

© : Academy
Copies : 500
First Impression : 2016
Pages : 56
Price : Rs. 25/-

Printed at
**Regal Print Service**
Bangalore - 26
M: 9964351655

# ಮುನ್ನುಡಿ

**ಕ**ರ್ನಾಟಕ ಸಂಗೀತದ ಆಧಾರಸ್ತಂಭಗಳಾದ ದಿವಂಗತ ಎಂ.ಎಲ್. ವಸಂತ ಕುಮಾರಿ, ಎಂ.ಎಸ್. ಸುಬ್ಬುಲಕ್ಷ್ಮಿ ಮತ್ತು ಡಿ.ಕೆ. ಪಟ್ಟಮ್ಮಾಳ್ ಇವರುಗಳು – ಈ ಕ್ಷೇತ್ರದ ತ್ರಿಮೂರ್ತಿಗಳು, ಇಲ್ಲಿಗೆ ಮಹಿಳೆಯರ ಪ್ರವೇಶಕ್ಕೆ ದಾರಿದೀಪಗಳು.

ಭಾರತೀಯ ಸಂಗೀತ ಪರಂಪರೆಯ ದಂತಕಥೆಯಾದ ಗಾನ ಸರಸ್ವತಿ ಪದ್ಮವಿಭೂಷಣ ಡಿ.ಕೆ. ಪಟ್ಟಮ್ಮಾಳ್ ಅವರು ಬ್ರಾಹ್ಮಣ ಮಹಿಳೆಯರು ವೇದಿಕೆಯ ಮೇಲೆ ಸಂಗೀತ ಹಾಡುವ ಪದ್ಧತಿ ಸಾಮಾಜಿಕವಾಗಿ ಮಾನ್ಯ ವಾಗಿರದ ಕಾಲದಲ್ಲಿ ಸಾರ್ವಜನಿಕ ವೇದಿಕೆಯಲ್ಲಿ ರಾಗಂ ತಾನಂ ಪಲ್ಲವಿಯನ್ನು ತಾಂತ್ರಿಕವಾಗಿ ಸಾದರಪಡಿಸಿ "ಪಲ್ಲವಿ ಪಟ್ಟಮ್ಮಾಳ್" ಎಂದೇ ಪ್ರಸಿದ್ಧರಾದ ಸಂಗೀತ ವಿದುಷಿ.

ಗುರುಕುಲ ಪದ್ಧತಿಯಡಿ ಯಾವುದೇ ಶಿಕ್ಷಣ ಪಡೆಯದೆ, ತಮ್ಮ 10ನೇ ವಯಸ್ಸಿಗೆ 1929ರಲ್ಲಿ ಮದರಾಸ್ ಕಾರ್ಪೋರೇಷನ್ ರೇಡಿಯೋ (ಇಂದಿನ ಆಕಾಶವಾಣಿ) ಮೂಲಕ ಪ್ರಪ್ರಥಮವಾಗಿ ಬಾನುಲಿ ಸಂಗೀತ ಕಾರ್ಯಕ್ರಮ ನೀಡಿದವರು.

ಮುತ್ತುಸ್ವಾಮಿ ದೀಕ್ಷಿತರ ರಚನೆಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ವಿದುಷಿ ಡಿ.ಕೆ. ಪಟ್ಟಮ್ಮಾಳ್ ಅವರು ಅವುಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರು ಹಾಗೂ ಆ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡುವವರಾಗಿದ್ದರು.

ಇಂತಹ ಮಹಾನ್ ಸಂಗೀತ ತಜ್ಞೆಯ ಜೀವನ, ಸಾಧನೆಗಳ ಪರಿಚಯದ ಪುಸ್ತಿಕೆಯನ್ನು ಸಿದ್ಧಪಡಿಸಿರುವವರು ಡಿ.ಕೆ. ಪಟ್ಟಮ್ಮಾಳ್ ಅವರ ಒಡನಾಡಿ, ಶಿಕ್ಷಣ, ಸಂಗೀತ ಕ್ಷೇತ್ರಗಳಲ್ಲಿ ಉತ್ತಮ ಪರಿಶ್ರಮವುಳ್ಳ ಸ್ವತಃ ಪಿಟೀಲು ವಾದಕರೂ, ಹಾಡುಗಾರರೂ ಆದ ಡಾ. ಎಸ್.ಸಿ. ಶರ್ಮ ಅವರು. ಶ್ರೀಯುತರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಾ, ಈ ಪುಟ್ಟ ಪುಸ್ತಿಕೆ ಸಂಗೀತಾಸಕ್ತರಿಗೆ ಉತ್ತಮ ಕೊಡುಗೆ ಎಂದು ಭಾವಿಸಿದ್ದೇನೆ.

**ಗಂಗಮ್ಮ ಕೇಶವಮೂರ್ತಿ**

ಅಧ್ಯಕ್ಷರು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

ಬೆಂಗಳೂರು

# ಕೃತಜ್ಞತೆಗಳು

**ಕ**ರ್ನಾಟಕ ಸಂಗೀತಕ್ಕೆ ದಿ॥ ಡಿ.ಕೆ. ಪಟ್ಟಮ್ಮಾಳ್ ಅವರ ಕಾಣಿಕೆ ಅತ್ಯಮೂಲ್ಯ. ಅವರ ಕುರಿತು ಅಧ್ಯಯನ ನಡೆಸುವ ಭಾಗ್ಯ ನನ್ನದಾಗಿದೆ.

ಬೆಂಗಳೂರಿನಲ್ಲಿ ನೆಲೆಸಿರುವ ಪಟ್ಟಮ್ಮಾಳ್‌ರ ಪುತ್ರ ಶ್ರೀ ಲಕ್ಷ್ಮಣಕುಮಾರ್ ಇವರು ಅಗತ್ಯ ನೆರವು ನೀಡಿ, ನನ್ನ ಬರವಣಿಗೆಯನ್ನು ಓದಿ, ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರ ಸಾಧನೆಗಳನ್ನು ಪರಿಚಯಿಸುವ ಮೂಲಕ ನನಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಇವರಿಗೆ ನಾನು ಋಣಿಯಾಗಿದ್ದೇನೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಮಾನ್ಯ ಅಧ್ಯಕ್ಷರಾದ ಗಮಕ ಕಲಾನಿಧಿ, ಕಲಾಶ್ರೀ ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರು ರಿಜಿಸ್ಟ್ರಾರ್ ಶ್ರೀ ಟಿ.ಜಿ. ನರಸಿಂಹಮೂರ್ತಿಯವರು ನನ್ನ ಪುಸ್ತಿಕೆಯನ್ನು ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಅಕಾಡೆಮಿಗೆ ನಾನು ಆಭಾರಿಯಾಗಿದ್ದೇನೆ.

ಮೆಸರ್ಸ್ ಶ್ರುತಿ ಫೌಂಡೇಶನ್ ಅವರು ಪಟ್ಟಮ್ಮಾಳ್‌ರಿಗೆ ಸಂಬಂಧಿಸಿದ ದೃಶ್ಯಾವಳಿಗಳನ್ನು ಒದಗಿಸಿ ಸಹಕರಿಸಿದ್ದಕ್ಕಾಗಿ ಧನ್ಯವಾದಗಳು.

ಸಂಗೀತ ವಿದುಷಿ ಶ್ರೀಮತಿ ಡಿ. ಶಶಿಕಲಾ ಪಟ್ಟಮ್ಮಾಳರ ಸಂಗೀತ ಸಾಧನೆಯನ್ನು ವಿಶ್ಲೇಷಿಸಲು ಹಲವಾರು ಸಲಹೆಗಳನ್ನು ನೀಡಿ ಉಪಕರಿಸಿದ್ದಾರೆ. ಅವರಿಗೆ ನನ್ನ ವಂದನೆಗಳು.

ಶ್ರೀಮತಿ ಕೃಷ್ಣವೇಣಿ ಅಮ್ಮ (ಲೇಟ್ ಶ್ರೀ ವರದರಾಜನ್‌ರ ಪತ್ನಿ) ಪಟ್ಟಮ್ಮಾಳ್‌ರ ಕುರಿತ ಹಾಗೂ ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆಗಳ ಅಮೂಲ್ಯ ಭಂಡಾರವನ್ನೇ ತೆರೆದಿರಿಸಿದ್ದಾರೆ. ಅವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಕೃತಿಯನ್ನು ಹೊರತರುವಲ್ಲಿ ಡಾ॥ ವಾಣಿಶ್ರೀ, ಉಪನ್ಯಾಸಕರು, ಕನ್ನಡ ವಿಭಾಗ, ವಿಜಯ ಕಾಲೇಜು, ಬೆಂಗಳೂರು, ಶ್ರೀ ಬಿ.ವಿ. ಗುರುಪ್ರಸಾದ್, ಶೀಘ್ರಲಿಪಿಗಾರ, ಇವರುಗಳಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಕೃತಜ್ಞೆಗಳು.

**ಡಾ॥ ಎಸ್.ಸಿ. ಶರ್ಮ**

# ಒಳಪಿಡಿ


**1. ಜೀವನ–ಬಾಲ್ಯ** ... **7**

ದೈವಾನುಗ್ರಹ

2. **ಸಂಗೀತ ಕಲಿಕೆ** ... **10**

ತೆಲುಗು ವಾದಿಯಾರ್

ನೈನಾ ಪಿಳ್ಳೈ

ಅಮ್ಮುಕುಟ್ಟಿ ಅಮ್ಮಾಳ್

ಬೇಸಿಗೆ ಸಂಗೀತ ಶಾಲೆ

ಸಂಗೀತ ಪರೀಕ್ಷೆ

ಮೊದಲ ನಿರೂಪಣೆ

ಕಂಚಿಯಿಂದ ಮದರಾಸಿಗೆ

ವಿವಾಹ

ಸಂಪ್ರದಾಯದ ಮುರಿದು ಕಟ್ಟುವಿಕೆ:

**3. ಸಂಗೀತ ಪಯಣ** ... **21**

ಕಲಾ ಪ್ರಾವೀಣ್ಯಾ

ಸಾಂಪ್ರದಾಯಿಕ ಶೈಲಿ

ಸಂಗೀತ ದೈತ್ಯರೊಡನೆ ಸ್ಪರ್ಧೆ

ಬದಲಾದ ಶೈಲಿ

ಹೃದಯಗೆದ್ದ ಗಾನಗೋಷ್ಠಿಗಳು

**4. ಕಲಾ ವಿಮರ್ಶೆ** ... **28**

**5. ಸಂಗೀತ–ಪಟ್ಟಮ್ಮಾಳರ ದೃಷ್ಟಿಯಲ್ಲಿ** ... **31**

**6. ಸನ್ಮಾನ, ಮನ್ನಣೆ ಹಾಗೂ ಪ್ರಶಸ್ತಿಗಳು** ... **36**

**7. ಕಿರಿಯರಿಗೆ ಮಾರ್ಗದರ್ಶನ** ... **39**

**8. ವ್ಯಕ್ತಿತ್ವದ ಒಳನೋಟ, ಮಹತ್ವಪೂರ್ಣ ಘಟನೆಗಳು** ... **41**

ಪರಾಮರ್ಶೆ

ಲೇಖಕರ ಕುರಿತು

ಚಿತ್ರ ವಿಭಾಗ

# ಜೀವನ-ಬಾಲ್ಯ

ಐತಿಹಾಸಿಕ ದೇಗುಲಗಳ ನಗರ ಎಂದೇ ಖ್ಯಾತಿ ಪಡೆದ ಕಾಂಚೀಪುರದ ಸಮೀಪದ ಪುಟ್ಟ ಗ್ರಾಮ ದಮಾಲ್. ಅಲ್ಲಿ ನೆಲೆಸಿದ್ದ ದಮಾಲ್ ಕೃಷ್ಣಸ್ವಾಮಿ ದೀಕ್ಷಿತರು ಮತ್ತು ಶ್ರೀಮತಿ ಕಾಂತಿಮತಿ ಅವರ ಮಗಳಾಗಿ ಡಿ.ಕೆ. ಪಟ್ಟಮ್ಮಾಳ್ 1919ರಲ್ಲಿ ಜನಿಸಿದರು. ದೀಕ್ಷಿತರ ಐವರು ಮಕ್ಕಳಲ್ಲಿ ಎರಡನೆಯ ಹಾಗೂ ಏಕೈಕ ಪುತ್ರಿ ಈಕೆ. ಹಿರಿಯ ಅಣ್ಣ ಡಿ.ಕೆ. ರಂಗನಾಥನ್. ಅವರ ತಮ್ಮಂದಿರು ಕ್ರಮವಾಗಿ ಡಿ.ಕೆ. ಸುಬ್ರಮಣಿಯನ್, ಡಿ.ಕೆ. ನಾಗರಾಜನ್ ಮತ್ತು ಡಿ.ಕೆ. ಜಯರಾಮನ್. ಕೃಷ್ಣಸ್ವಾಮಿ ದೀಕ್ಷಿತರು ಶಾಲಾ ಮಾಸ್ತರಾಗಿದ್ದರು. ತಾಯಿ ಗೃಹಿಣಿ, ಕಾಂತಿಮತಿ ಅವರಿಗೆ ಕರ್ನಾಟಕ ಸಂಗೀತದ ಪರಿಚಯವಿತ್ತು. ಸಂಗೀತವನ್ನು ಕಲಿಯದಿದ್ದರೂ ಆಕೆ 'ಕೃತಿ'ಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ತೆಲುಗು ತಿಳಿದಿದ್ದರಿಂದ ತೆಲುಗು ಕೃತಿಗಳನ್ನು ಹಾಡುತ್ತಿದ್ದರು. ಅಂದಿನ ಸಾಮಾಜಿಕ ಪದ್ಧತಿಯಂತೆ ಮನೆಯ ಹೊರಗೆ ಸಾರ್ವಜನಿಕವಾಗಿ ಹಾಡಲು ಅವಕಾಶವಿರಲಿಲ್ಲ. ಸಮಾರಂಭಗಳಲ್ಲೂ ಹಾಡುವುದು ನಿಷಿದ್ಧ ವಾಗಿದ್ದಿತು. ಕೃಷ್ಣಸ್ವಾಮಿ ದೀಕ್ಷಿತರಿಗೂ ಸಂಗೀತದಲ್ಲಿ ಅಪಾರ ಆಸಕ್ತಿ. ಅವರಿಗೆ ನೈನಾ ಪಿಳ್ಳೈ, ಅರಿಯಕುಡಿ ರಾಮಾನುಜ ಅಯ್ಯಂಗಾರರಂತಹ ದಿಗ್ಗಜಗಳ ಗಾನಸುಧೆ ಸವಿಯುವ ಸದವಕಾಶ ಒದಗಿತ್ತು. ಕಾಂಭೋಜಿ, ಆನಂದಭೈರವಿ, ಮೋಹನ ಹಾಗೂ ನವರೋಜು ರಾಗಗಳ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಬಲ್ಲ ಜ್ಞಾನ ಅವರಲ್ಲಿತ್ತು. ವಿಧ್ಯುಕ್ತವಾಗಿ ಸಂಗೀತ ಕಲಿಯದಿದ್ದರೂ ಪಟ್ಟಮ್ಮಾಳ್ ಅವರ ತಂದೆ-ತಾಯಿಗಳ ಕರ್ನಾಟಕ ಸಂಗೀತದೆಡೆಗಿನ ಒಲವು ಪಟ್ಟಮ್ಮಾಳ್‌ರಲ್ಲಿಯೂ ರಕ್ತಗತವಾಗಿ ಬಂದಿತ್ತು. ಆಕೆ ಮುಂದೆ ತನ್ನ ಸಂಗೀತ ಸೌಧ ಕಟ್ಟಲು ಪೋಷಕರ ಆಸಕ್ತಿಯು ಪ್ರೇರಕವಾಗಿ ಭದ್ರ ಅಡಿಪಾಯ ನಿರ್ಮಿಸಿದವು.

ಪಟ್ಟಮ್ಮಾಳ್ ಅವರದ್ದು ಮಧ್ಯಮ ವರ್ಗದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬ. ಸಂಗೀತವು ಅವರ ಧಾರ್ಮಿಕ ಬದುಕಿನ ಅವಿಭಾಜ್ಯ

ಅಂಗವಾಗಿತ್ತು. ಭಕ್ತಿ ಗೀತೆಗಳನ್ನು ಹಾಡಲು, ಶ್ಲೋಕಗಳನ್ನು ಪಠಿಸಲು ಅವರಿಗೆ ಲೆಕ್ಕವಿಲ್ಲದಷ್ಟು ಪ್ರಸಂಗಗಳು ಒದಗುತ್ತಿದ್ದವು. ಹಬ್ಬದ ದಿನಗಳಲ್ಲಿ ಅವರಿವರ ಮನೆಗಳಿಗೆ ಹೋದಾಗ ಹೆಣ್ಣುಮಕ್ಕಳು ಹಾಡುಗಳನ್ನು ಹೇಳುತ್ತಿದ್ದರು. ರಾಮ ನವಮಿ, ತ್ಯಾಗರಾಜರ ಆರಾಧನಾ ಸಂದರ್ಭಗಳಲ್ಲಿ ಸಾರ್ವಜನಿಕ ಸಂಗೀತ ಕಚೇರಿಗಳನ್ನು ಏರ್ಪಡಿಸಲಾಗುತ್ತಿತ್ತು. ಪಟ್ಟಮ್ಮಾಳ್ ಅವರ ತಂದೆ ಆಕೆಯನ್ನು ಇಂತಹ ಕಚೇರಿಗಳಿಗೆ ತಪ್ಪದೇ ಕರೆದೊಯ್ಯುತ್ತಿದ್ದರು. ಹೆಸರಾಂತ ಸಂಗೀತ ವಿದ್ವಾಂಸರು ನಡೆಸಿಕೊಡುತ್ತಿದ್ದ ಈ ಕಚೇರಿಗಳು ಪಟ್ಟಮ್ಮಾಳ್‌ರ ಪುಟ್ಟ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರಿದವು. ಮುಂದೆ ಆಕೆಯ ಪ್ರತಿಭೆ ಹೊರಹೊಮ್ಮಲು ಇದು ಸಹಾಯಕವಾಯಿತು. ತ್ಯಾಗರಾಜರ ಆರಾಧನೆಯ ಸಂದರ್ಭದಲ್ಲಿ ಕೇಳಿದ ಹಾಡುಗಳನ್ನು ಹಾಗೇ ಅನುಕರಿಸಿ ಹಾಡುತ್ತಿದ್ದ ಆಕೆಯ ಅಸಾಧಾರಣ ಬುದ್ಧಿ ಶಕ್ತಿಯಿಂದ ಅವರ ಪ್ರತಿಭೆಯನ್ನು ಗುರುತಿಸುವಂತೆ ಆಯಿತು.

ಅಂದಿನ ದಿನಗಳಲ್ಲಿ ದಕ್ಷಿಣ ಭಾರತದ ವಿವಾಹ ಸಮಾರಂಭಗಳಲ್ಲಿ ಹೆಣ್ಣು ಮಕ್ಕಳು ಹಾಡುವುದು ಸಹಜವಾಗಿತ್ತು. ದೇವರ ಮುಂದೆ, ನವರಾತ್ರಿ ಹಬ್ಬದಲ್ಲಿ ಹಾಡುವುದು ಸಾಮಾನ್ಯವಾಗಿತ್ತು. ಹೆಣ್ಣು ಮಕ್ಕಳ ಹಾಡುವ ಸಾಮರ್ಥ್ಯ ನೋಡಿ ವಿವಾಹಗಳು ನಿಶ್ಚಿತವಾಗುತ್ತಿದ್ದವು. ಸಹಜವಾಗಿ ಎಲ್ಲ ಹೆಣ್ಣು ಮಕ್ಕಳು ಹಾಡು ಹಸೆ ಕಲಿಯುವುದು ಅನಿವಾರ್ಯವಾಗಿತ್ತು.

## ದೈವಾನುಗ್ರಹ:

ಪಟ್ಟಮ್ಮಾಳರು ಧಾರ್ಮಿಕ ಶ್ರದ್ಧೆಯುಳ್ಳವರಾಗಿದ್ದರು. ತಮ್ಮ ಸಂಗೀತ ಕ್ಷೇತ್ರದಲ್ಲಿನ ಎಲ್ಲ ಸಾಧನೆಗಳ ಪ್ರೇರಕ ಶಕ್ತಿ ತಾವು ಚಿಕ್ಕಂದಿನಲ್ಲಿ ಇಬ್ಬರು ಮಹಾನ್ ವ್ಯಕ್ತಿಗಳಿಂದ ಪಡೆದ ಅನುಗ್ರಹವೇ ಎಂಬುದನ್ನು ದೃಢವಾಗಿ ನಂಬಿದ್ದರು. ತಿರುವಣ್ಣಾಮಲೈನಲ್ಲಿ ಶ್ರೀರಮಣ ಮಹರ್ಷಿಗಳನ್ನು ಕೆಲವು ತಿಂಗಳ ಮಗುವಾದ ಪಟ್ಟಮ್ಮಾಳ್ ದರ್ಶಿಸಿದಾಗ ಅವರು ಒಂದು ಹನಿ ಜೇನನ್ನು ಮಗುವಿಗೆ ತಿನ್ನಿಸಿ ಆಶೀರ್ವದಿಸಿದ್ದರು. ಚಿಕ್ಕಂದಿನಲ್ಲೇ ಕಂಚಿ ಪರಮಾಚಾರ್ಯರಿಂದಲೂ ಅನುಗ್ರಹಿತ ರಾಗಿದ್ದರು. ಅವರು ಉಪದೇಶಿಸಿದ ಮಂತ್ರ, ಶ್ಲೋಕಗಳನ್ನು ಅಂದಿನಿಂದ ತಮ್ಮ ಜೀವಿತದ ಕೊನೆಯವರೆಗೂ ನಿರಂತರವಾಗಿ ಆಕೆ ಪಠಿಸುತ್ತಿದ್ದರು.

## ಅದ್ಭುತ ಪ್ರತಿಭೆ:

ಪಟ್ಟಮ್ಮಾಳ್ ಅವರಿಗೆ ಬಾಲ್ಯದಿಂದಲೂ ಸಂಗೀತದೆಡೆಗೆ ಸೆಳೆತವಿದ್ದಿತು. ನಾಲ್ಕು ವರ್ಷದ ಮಗುವಾಗಿದ್ದಾಗಿನಿಂದ ಅವರ ತಂದೆ ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಬೆಳಗಿನ ಜಾವ 3 ಘಂಟೆಗೆ ಎದ್ದು ಆಕೆ ಶ್ಲೋಕಗಳನ್ನು ಪಠಿಸುತ್ತಾ, ಮನನ ಮಾಡಿಕೊಳ್ಳುತ್ತಿದ್ದರು. ಇದು 6 ಘಂಟೆಯವರೆಗೂ ಮುಂದುವರೆಯುತ್ತಿತ್ತು. ನಂತರ 8 ಘಂಟೆಯ ನಂತರ ಪುನಃ ಆರಂಭವಾಗುತ್ತಿತ್ತು. ನಿತ್ಯವೂ ಸಂಜೆ ದೀಪ ಹಚ್ಚುವ ಸಮಯದಲ್ಲಿ ಶ್ಲೋಕಗಳ ಪಠಣ, ಮನನಾದಿಗಳು ನಡೆಯುತ್ತಿದ್ದವು. ಅವರ ನೆನಪಿನ ಶಕ್ತಿ ಅದ್ಭುತವಾಗಿತ್ತು. ತಂದೆ ಹೇಳುವ ಶ್ಲೋಕಗಳನ್ನು ಶ್ರದ್ಧೆಯಿಂದ ಕೇಳಿ ಅದರಂತೆ ತಾವೂ ಕಲಿಯುತ್ತಿದ್ದರು. ಕೃಷ್ಣ ಕರ್ಣಾಮೃತಂ, ಮೀನಾಕ್ಷಿ ಪಂಚರತ್ನಂ, ಅನ್ನಪೂರ್ಣ ಅಷ್ಟಕಂ, ಶ್ಯಾಮಲಾ ದಂಡಕಂ ಹಾಗೂ ಮುಕುಂದಮಾಲಾ ಮೊದಲಾದ ಸ್ತೋತ್ರಗಳನ್ನು ತಂದೆಯವರು ಹೇಳಿಕೊಟ್ಟಂತೆ ಕಲಿತು ಅಭ್ಯಾಸ ಮಾಡುತ್ತಿದ್ದರು. ಸಹೋದರ ರಂಗನಾಥನೊಡನೆ ಅಭ್ಯಾಸ ನಡೆಯುತ್ತಿತ್ತು.

ಪಟ್ಟಮ್ಮಾಳ್‌ರ ಬಾಲ್ಯದಲ್ಲಿಯೇ ಅವರ ಪ್ರತಿಭೆ ಗುರುತಿಸಲ್ಪಟ್ಟಿತ್ತು. ಆಕೆ ಶ್ಲೋಕಗಳನ್ನು ಹೇಳುತ್ತಿದ್ದರೆ ಎಲ್ಲರೂ ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಅವರ ಸಂಗೀತ ಕೌಶಲವನ್ನು ಗುರುತಿಸಿದ ಕೀರ್ತಿ ಅವರ ತಂದೆಗೆ ಸಲ್ಲಬೇಕು. ಮೇಧಾವಿಯಾದ ಮಗಳಲ್ಲಿ ಸಂಗೀತ ಪ್ರೇಮವನ್ನು ಉದ್ದೀಪಿಸಿ ಮಹಾನ್ ಗಾಯಕಿಯಾಗಿ ರೂಪಿಸಿದ ತಂದೆಯ ಸಾಧನೆಯೂ ಕಡಿಮೆಯೇನಲ್ಲ. ಒಮ್ಮೆ ಪಟ್ಟಮ್ಮಾಳ್ ಮದುವೆ ಸಮಾರಂಭದಲ್ಲಿ ತಮ್ಮನ ಜೊತೆಗೂಡಿ ಹಾಡಿದಾಗ ಬಂಧುಗಳೆಲ್ಲ ವಿಸ್ಮಿತರಾಗಿ ಆಕೆಯ ಸಂಗೀತ ಪ್ರೌಢಿಮೆಯನ್ನು ಮನಸಾರೆ ಮೆಚ್ಚಿಕೊಂಡರು. ಆಗ ಅವರಿಗೆ ಕೇವಲ ಆರು ವರ್ಷ.

# ಸಂಗೀತ ಕಲಿಕೆ

**ಪ**ಟ್ಟಮ್ಮಾಳ್‌ರಿಗೆ ಒಬ್ಬ ಗುರುವಿನ ಬಳಿ ಸಾಂಪ್ರದಾಯಿಕವಾಗಿ ಸಂಗೀತ ಕಲಿಯುವ ಅವಕಾಶ ದೊರೆಯಲಿಲ್ಲ. ಅಂದಿನ ಸಾಮಾಜಿಕ ಪರಿಸ್ಥಿತಿಯೂ ಅದಕ್ಕೆ ಕಾರಣ. ಹೆಸರಾಂತ ಸಂಗೀತ ವಿದ್ವಾಂಸರು ಮದರಾಸಿನಲ್ಲಿ ಇರುತ್ತಿದ್ದರು. ಪಟ್ಟಮ್ಮಾಳ್‌ರು ಇದ್ದದ್ದು ಕಂಚಿಯಲ್ಲಿ. ನಿತ್ಯವೂ ಸಂಗೀತ ಪಾಠಕ್ಕಾಗಿ ಮದರಾಸಿಗೆ ಹೋಗಿ ಬರುವುದು ಸಾಧ್ಯವಿರಲಿಲ್ಲ. ಅಲ್ಲಿಯೇ ನೆಲೆಸಲೂ ಆಗುತ್ತಿರಲಿಲ್ಲ. ಮೇಲಾಗಿ ವಿದ್ವಾಂಸರ ಬಳಿ ಪಾಠ ಹೇಳಿಸಲು ಹಣದ ಅಗತ್ಯವೂ ಇತ್ತು. ಶಾಲಾ ಮಾಸ್ತರರಾದ ಆಕೆಯ ತಂದೆಗೆ ದುಬಾರಿ ಶುಲ್ಕಗಳನ್ನು ಭರಿಸಲು ಶಕ್ಯವಿರಲಿಲ್ಲ. ಈ ಎಲ್ಲ ಕಾರಣಗಳಿಂದ ಆಕೆ ಒಬ್ಬರಲ್ಲಿ ಸಂಗೀತ ವಿದ್ಯೆ ಕಲಿಯಲು ಆಗಲಿಲ್ಲ. ಹಲವರ ಬಳಿ ಕಲಿತರೂ, ಕಲಿತದ್ದನ್ನು ಶ್ರದ್ಧೆಯಿಂದ ಕಲಿತರು.

## ತೆಲುಗು ವಾದಿಯಾರ್:

ಪಟ್ಟಮ್ಮಾಳರ ಮೊದಲ ಗುರು ನಿಸ್ಸಂದೇಹವಾಗಿ ಅವರ ತಂದೆಯೇ. ಆಕೆಯಲ್ಲಿದ್ದ ಸುಪ್ತ ಪ್ರತಿಭೆಯನ್ನು ಗುರುತಿಸಿ, ನಾಲ್ಕನೇ ವಯಸ್ಸಿನಿಂದಲೇ ಶ್ಲೋಕಗಳನ್ನು ಹೇಳಿಕೊಟ್ಟು ಆ ಮೂಲಕ ಆಕೆಯಲ್ಲಿ ಸಂಗೀತಾಸಕ್ತಿ ಹುಟ್ಟಿಸಿದರು. ಮಗಳ ಪ್ರತಿಭೆಯನ್ನು ಪ್ರೋತ್ಸಾಹಿಸಿ, ಪೋಷಿಸಿದರು. ಇದು ಪಟ್ಟಮ್ಮಾಳರ ಸಂಗೀತ ವೃತ್ತಿಪರತೆಯ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಅವರ ಜೀವನದಲ್ಲಿ ಇನ್ನೂ ಕೆಲವು ಮಹಾನ್ ವ್ಯಕ್ತಿಗಳು ಆಕೆಯ ಸಂಗೀತ ಪ್ರೌಢಿಮೆಯನ್ನು ವೃದ್ಧಿಸಲು ಸೂಕ್ತ ಸಲಹೆ, ಮಾರ್ಗದರ್ಶನ ನೀಡಿದ್ದಾರೆ. ಪಟ್ಟಮ್ಮಾಳರಿಗೆ ಆರು ವರ್ಷಗಳ ಪ್ರಾಯ. ಆಗ ಒಮ್ಮೆ ವಿವಾಹ ಮಹೋತ್ಸವಕ್ಕೆ ಹೋಗಿದ್ದರು. ಅಲ್ಲಿ ಹಾಡು ಹೇಳಿದರು. ಆ ಸಂದರ್ಭದಲ್ಲಿ ಹೆಸರು ತಿಳಿಯದ ಮಹನೀಯರೊಬ್ಬರು ಆಕೆಯ ಸಾಮರ್ಥ್ಯವನ್ನು ಗುರುತಿಸಿದರು. ಅವರನ್ನು ಪಟ್ಟಮ್ಮಾಳರು **'ತೆಲುಗು ವಾದಿಯಾರ್'** ಎಂದು ನೆನೆಸಿಕೊಳ್ಳುತ್ತಾರೆ. ಅವರೊಬ್ಬ ಸಂಗೀತ ಶಿಕ್ಷಕರಾಗಿದ್ದರು. ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯ

**'ಆರಣಿ'** ಅವರ ಸ್ವಂತ ಸ್ಥಳ. ಪಟ್ಟಮ್ಮಾಳರ ಹಾಡನ್ನು ಕೇಳಿದ ಅವರು ಸ್ವತಃ ತಾವೇ ಆಕೆಗೆ ಸಂಗೀತ ಶಿಕ್ಷಣ ನೀಡುವುದಾಗಿ ನಿರ್ಧರಿಸಿದರು. ಪಟ್ಟಮ್ಮಾಳರ ಮನೆಯಲ್ಲಿ 20 ದಿನಗಳ ಕಾಲ ನೆಲೆಸಿ ಸಾಂಪ್ರದಾಯಿಕ ಸಂಗೀತ ಪಾಠ ಮಾಡಿದರು. ಅವರಿಂದ **'ತುಳಸಿ ಬಿಲ್ವ'** ಹಾಗೂ ತೋಡಿ ರಾಗದ ಕೃತಿಯಾದ **'ಕೊಲುವ ಮರಗದ'** ಎಂಬ ಹಾಡುಗಳನ್ನು ಕಲಿತರು. ತೆಲುಗು ವಾದಿಯಾರರನ್ನು ತಮ್ಮ ಜೀವಿತಾವಧಿಯವರೆಗೂ ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು.

## ನೈನಾಪಿಳ್ಳೈ:

ನೈನಾಪಿಳ್ಳೈ ಎಂಬ ಪ್ರಖ್ಯಾತ ಸಂಗೀತ ವಿದ್ವಾಂಸ ಮಹನೀಯರು ಕಾಂಚೀಪುರದಲ್ಲಿ ಸಂಗೀತ ಗೋಷ್ಠಿಗಳನ್ನು ನಡೆಸಿಕೊಡುತ್ತಿದ್ದರು. ಅವರ ಕಾರ್ಯಕ್ರಮಗಳಿಗೆ ಪಟ್ಟಮ್ಮಾಳ್ ತಂದೆಯವರೊಡನೆ ತಪ್ಪದೇ ಹೋಗುತ್ತಿದ್ದರು. ನೈನಾ ಪಿಳ್ಳೈ ಅವರ ಹಾಡುಗಾರಿಕೆ ಅವರ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ ಪಟ್ಟಮ್ಮಾಳ್ ಅವರನ್ನು **'ಮಾನಸಿಕ ಗುರು'** ಎಂದೇ ಪರಿಗಣಿಸಿದರು. ನೈನಾರು ವಯಲಿನ್, ಮೃದಂಗ, ಘಟ, ಕಂಜುರಿ, ಡೋಲಕ್, ಮೋರ್ಸಿಂಗ್ ಹಾಗೂ ಕನ್ನಕೋಲು ಮುಂತಾದ ಪಕ್ಕ ವಾದ್ಯಗಳೊಂದಿಗೆ ಕಚೇರಿ ನೀಡುತ್ತಿದ್ದರು. ಶಾಸ್ತ್ರೀಯ ಸಂಗೀತದಲ್ಲಿ ಅತ್ಯುತ್ತಮ ಪದ್ಧತಿ ಎಂದು ಪರಿಗಣಿಸಲ್ಪಟ್ಟ ಭಾವ-ತಾಳಗಳನ್ನು ಮೇಳೈಸಿ ಹಾಡುವ ಶೈಲಿಯನ್ನು ಪಟ್ಟಮ್ಮಾಳ್ ನೈನಾರ ಸಂಗೀತದಲ್ಲಿ ಗುರುತಿಸಿದರು. ನೈನಾ ಅವರು ಕ್ಲಿಷ್ಟಕರವಾದ ಸ್ವರ ವಿನ್ಯಾಸಗಳನ್ನು ಸೃಷ್ಟಿಸುವಲ್ಲಿ ಹಾಗೂ ಪಲ್ಲವಿಯ ಸಂಕೀರ್ಣ ತಾಳಗಳನ್ನು ನಿಭಾಯಿಸುವಲ್ಲಿ ನಿಷ್ಣಾತರಾಗಿದ್ದರು. ಪಲ್ಲವಿಯನ್ನು ಎರಡು ಗಂಟೆಗಳ ಕಾಲ ಹಾಡಬಲ್ಲವರಾಗಿದ್ದರು. ಪಟ್ಟಮ್ಮಾಳರಿಗೆ ಈ ಶೈಲಿಯು ಮಾದರಿಯಾಗಿತ್ತು. ನೈನಾರಂತೆಯೇ ಹಾಡುವ ಅಭ್ಯಾಸವನ್ನು ಆಕೆ ಮಾಡಿಕೊಂಡರು. ಪಲ್ಲವಿಯನ್ನು ನೈನಾರನ್ನು ಅನುಸರಿಸಿ ಹಾಡುತ್ತಿದ್ದರು. ಬಾಲಕಿ ಪಟ್ಟಮ್ಮಾಳರಿಗೆ ನೈನಾರ ಶಾಸ್ತ್ರೀಯ ಶೈಲಿಯು ನಿಜವಾದ ಸ್ಫೂರ್ತಿಯ ಸೆಲೆಯಾಗಿತ್ತು.

ಪಟ್ಟಮ್ಮಾಳರು ನೈನಾಪಿಳ್ಳೈ ಅವರ ಶೈಲಿಯನ್ನೇ ಅನುಕರಿಸಿ ತಮ್ಮ ಸಂಗೀತ ಕಾರ್ಯಕ್ರಮಗಳನ್ನು ತಾವೇ ಯೋಜಿಸಿ, ರೂಪಿಸುತ್ತಿದ್ದರು. ನೈನಾ ಅವರ ತಾಯಿ ಕಾಮಾಕ್ಷಿ ಅಮ್ಮಾಳ್ ಅವರು ಪಟ್ಟಮ್ಮಾಳರಿಗೆ **'ಬ್ರೋವಮ್ಮ'**

(ಮಂಜಿರಾಗ) ಎಂಬ ಒಂದು ಕೃತಿಯನ್ನು ಕಲಿಸಿದರು. ಪಟ್ಟಮ್ಮಾಳ್ ಅದನ್ನು ಬಹಳ ಅನುಭವಿಸಿ ಆನಂದದಿಂದ ಕಲಿತರು. ಒಮ್ಮೆ ನವರಾತ್ರಿಯ ಸಂದರ್ಭದಲ್ಲಿ ನೈನಾ ಪಿಳ್ಳೈ ಅವರು ಆಯೋಜಿಸಿದ್ದ ಮಕ್ಕಳ ಹಾಡಿನ ಸ್ಪರ್ಧೆಯಲ್ಲಿ ಪಟ್ಟಮ್ಮಾಳ್ ಬಹುಮಾನ ಗಳಿಸಿದರು. ನಂತರ ಅವರಿಗೆ ನೈನಾರ ಎದುರು ಹಾಡುವ ಅವಕಾಶ ದೊರೆಯಿತು. ಇದನ್ನು ತನ್ನ ಸೌಭಾಗ್ಯ ಎಂದು ಪಟ್ಟಮ್ಮಾಳ್ ಭಾವಿಸಿದರು. ಪಟ್ಟಮ್ಮಾಳರ ಸಂಗೀತ ಆಲಿಸಿದ ಪಿಳ್ಳೈ ಆಕೆಯ ತಂದೆಯ ಬಳಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಪಿಳ್ಳೈ ಅವರಲ್ಲಿ ಸಂಗೀತಾಭ್ಯಾಸ ಮಾಡಿದ ಬೃಂದಾ–ಮುಕ್ತಾ ಸೋದರಿಯರು ಸಂಗೀತ ಕ್ಷೇತ್ರದಲ್ಲಿ ಜೋಡಿ ಹಾಡುಗಾರಿಕೆಯಲ್ಲಿ ಬಹು ಪ್ರಸಿದ್ಧರು. ಕರ್ನಾಟಕ ಸಂಗೀತ ಕಲಿಕೆಗೇ ಮೀಸಲಾಗಿದ್ದ ಪಿಳ್ಳೈಯವರ ಮನೆಯಲ್ಲಿ ಈ ಸೋದರಿಯರ ಸಂಪರ್ಕ ಪಟ್ಟಮ್ಮಾಳರಿಗೆ ಆಯಿತು. ಪಿಳ್ಳೈ ಅವರಿಗೆ ಕರ್ನಾಟಕ ಸಂಗೀತದ ಬಗ್ಗೆ ಇದ್ದ ಆಸಕ್ತಿ, ಒಲವು ಅಪಾರ. ತಮ್ಮಲ್ಲಿ ಕಲಿಯಲು ಬರುವವರಿಗಾಗಿ ಆತ ತಮ್ಮೆಲ್ಲ ಸಂಪಾದನೆಯನ್ನು ವಿನಿಯೋಗಿಸುತ್ತಿದ್ದರು.

## ಅಮ್ಮುಕುಟ್ಟಿ ಅಮ್ಮಾಳ್:

ಪಟ್ಟಮ್ಮಾಳ್ ಕಾಂಚಿಪುರದಲ್ಲಿ ಕಲಿಯುತ್ತಿದ್ದ ಶಾಲೆಯ ಮುಖ್ಯ ಶಿಕ್ಷಕಿ ಅಮ್ಮುಕುಟ್ಟಿ ಅಮ್ಮಾಳ್. ಪಟ್ಟಮ್ಮಾಳರ ಸಂಗೀತಾಸಕ್ತಿಯನ್ನು ವೃದ್ಧಿಸುವಲ್ಲಿ ಈಕೆ ಮಹತ್ವದ ಪಾತ್ರ ವಹಿಸಿದ್ದರು. ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ **'ಸತ್ಯವಾನ್ ಸಾವಿತ್ರಿ'** ಎಂಬ ನೃತ್ಯ ರೂಪಕದಲ್ಲಿ ನಟಿಸಲು ಅಮ್ಮುಕುಟ್ಟಿಯವರು ಪಟ್ಟಮ್ಮಾಳರನ್ನು ಪ್ರೋತ್ಸಾಹಿಸಿದರು. ಪಟ್ಟಮ್ಮಾಳ್ ಸಾವಿತ್ರಿ ಪಾತ್ರ ನಿರ್ವಹಿಸಿದರು. ಆ ಪಾತ್ರವು ಹಾಡಿದ **'ತಾಯಿ ಇರುದೆನ್ನ. . . . ತಂದೈ ಇರುದೆನ್ನ. . . .'** ಎಂಬ ಹಾಡನ್ನು ಕೇಳಿ ಪ್ರೇಕ್ಷಕ ವರ್ಗದಲ್ಲಿದ್ದ ಅಂಗಡಿಯ ಮಾಲೀಕ ಕಂದಸ್ವಾಮಿ ಎಂಬ ವ್ಯಕ್ತಿ ಬಹುವಾಗಿ ಮೆಚ್ಚಿ ಅಲ್ಲಿಯೇ ಚಿನ್ನದ ಪದಕವನ್ನು ಘೋಷಿಸಿದರು. ಮರುದಿನ ಕಂದಸ್ವಾಮಿ ಪಟ್ಟಮ್ಮಾಳರಿಗೆ ಚಿನ್ನದ ಪದಕವನ್ನು ಬಹೂಕರಿಸಿದರು. ಕಂದಸ್ವಾಮಿ ಪದಕ ನೀಡಿದ ಫೋಟೋ **'ದಿ ಹಿಂದೂ'** ಪತ್ರಿಕೆಯಲ್ಲಿ ಪ್ರಕಟವಾಯ್ತು. ಇದರಿಂದ ಕೃಷ್ಣಸ್ವಾಮಿ ದೀಕ್ಷಿತರು ಕೋಪಗೊಂಡರು. ಅಮ್ಮುಕುಟ್ಟಿ ಅವರು ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಡಾ|| ಪಿ.ಎಸ್. ಶ್ರೀನಿವಾಸ್ ಅವರೊಡನೆ ಕೃಷ್ಣ ದೀಕ್ಷಿತರನ್ನು ಭೇಟಿ ಮಾಡಿ ಪಟ್ಟಮ್ಮಾಳರ ಸಂಗೀತ ಪ್ರತಿಭೆಯನ್ನು ಪ್ರೋತ್ಸಾಹಿಸಿ ಬೆಳೆಸಬೇಕಾದ

ಅಗತ್ಯವನ್ನು ಮನದಟ್ಟು ಮಾಡಿಸಲು ಯತ್ನಿಸಿದರು. ಪಟ್ಟಮ್ಮಾಳರ ಭಾವಚಿತ್ರವನ್ನು ಪತ್ರಿಕೆಯಲ್ಲಿ ನೋಡಿದ ಕೊಲಂಬಿಯ ಗ್ರಾಮಾಫೋನ್ ಕಂಪನಿಯವರು ಅವರ ಸಂಗೀತವನ್ನು ರೆಕಾರ್ಡ್ ಮಾಡಲು ಮುಂದೆ ಬಂದರು. ಆಗಲೂ ಅಮ್ಮುಕುಟ್ಟಿ ಅಮ್ಮಾಳ್ ಹುಡುಗಿಯ ಬೆಂಬಲಕ್ಕೆ ನಿಂತು ಅವರ ತಂದೆಯನ್ನು ಒಪ್ಪಿಸಿದರು. ಹಾಡುಗಳ ಧ್ವನಿ ಮುದ್ರಣ ನಡೆಯಿತು. ಆಗ ಪಟ್ಟಮ್ಮಾಳರು ಹತ್ತು ವರ್ಷದ ಬಾಲಕಿ.

## ಬೇಸಿಗೆ ಸಂಗೀತ ಶಾಲೆ:

1930ರಲ್ಲಿ ಅಮ್ಮುಕುಟ್ಟಿಯವರು ಕೃಷ್ಣಸ್ವಾಮಿಯವರಲ್ಲಿ ಮಗಳನ್ನು ಬೇಸಿಗೆ ಸಂಗೀತ ಶಾಲೆಗೆ ಮದರಾಸು ಇಲ್ಲಿಗೆ ದಾಖಲಿಸಲು ಸಲಹೆ ಮಾಡಿದರು. ಅಲ್ಲಿ ಆಕೆಯ ಸಾಮರ್ಥ್ಯಕ್ಕೆ ಸಾಣೆ ಹಿಡಿಯುವ ಉದ್ದೇಶ ಅವರದ್ದಾಗಿತ್ತು. ಖ್ಯಾತ ಸಂಗೀತ ತಜ್ಞರಾದ ಪ್ರೊಫೆಸರ್ ಸಾಂಬಮೂರ್ತಿ ಆ ತರಗತಿಗಳನ್ನು ನಡೆಸುತ್ತಿದ್ದರು. ಆ ಶಾಲೆಯಲ್ಲಿ ಪಟ್ಟಮ್ಮಾಳ್ ಹಲವಾರು 'ಕೃತಿ'ಗಳನ್ನು ಹಾಡಲು ಕಲಿತರು. ಅಲ್ಲಿ ಆಕೆ ಇತರ ವಿದ್ಯಾರ್ಥಿಗಳೊಂದಿಗೆ, ಸಮೂಹ ಗಾನದಲ್ಲಿ ಪಾಲ್ಗೊಂಡರು. ಏಕಾಂಗಿಯಾಗಿಯೂ ಹಾಡಬೇಕಿತ್ತು. ವೀಣೆ, ವಯಲಿನ್ ನುಡಿಸುವಿಕೆಯನ್ನು ಬೇಸಿಗೆ ಶಾಲೆಯಲ್ಲಿ ಕಲಿತರು. ಬೇಸಿಗೆ ಶಾಲೆಯು ಆಕೆಯನ್ನು ಎರಡು ಸಾರ್ವಜನಿಕ ಕಾರ್ಯಕ್ರಮಗಳಿಗೆ ಅಣಿಗೊಳಿಸಿತು. ಮೈಲಾಪೂರ್‌ನ **'ರಸಿಕ ರಂಜಿನಿ ಸಭಾ'**ದಲ್ಲಿ ನಡೆದ ಸರಸ್ವತಿ ಪೂಜೆಯ ಸಂದರ್ಭದಲ್ಲಿ ಮೊದಲ ಬಾರಿ ಆಕೆ ಒಂದು ಘಂಟೆ ಹಾಡಿದರು. ಎರಡನೆಯ ಅವಕಾಶ ಮದರಾಸಿನ ಜಾರ್ಜ್ ಟೌನ್‌ನ ಗಾನ ಮಂದಿರದಲ್ಲಿ. ಈ ಎರಡು ಕಾರ್ಯಕ್ರಮಗಳ ನಂತರ ಪಟ್ಟಮ್ಮಾಳರ ಆತ್ಮವಿಶ್ವಾಸ ವೃದ್ಧಿಸಿತು. ತಂದೆಯ ವಿರೋಧದ ನಡುವೆಯೂ ಕೇಳುಗರ ಮುಂದೆ ಹಾಡುವ ಧೈರ್ಯ ಹೆಚ್ಚಾಯಿತು. ಈ ಕಾರ್ಯಕ್ರಮಗಳಿಗೆ ಸಂಗೀತ ಪ್ರೇಮಿಗಳು ತೋರಿದ ಪ್ರತಿಕ್ರಿಯೆ ದೀಕ್ಷಿತರಲ್ಲಿ ತಮ್ಮ ಮಗಳು ಸಂಗೀತವನ್ನು ವೃತ್ತಿಯಾಗಿ ಸ್ವೀಕರಿಸಿದರೆ ಗೌರವಯುತವಾಗಿಯೇ ಇರುವುದೆಂಬ ಭಾವನೆ ಮೂಡಿಸಿತು.

## ಸಂಗೀತ ಪರೀಕ್ಷೆಗಳು:

ಅಮ್ಮುಕುಟ್ಟಿ ದೀಕ್ಷಿತರನ್ನು ಮಗಳಿಗೆ ಮದರಾಸಿನಲ್ಲಿ ನಡೆಯುವ ಸಂಗೀತ ಪರೀಕ್ಷೆಗೆ ಕರೆದೊಯ್ಯಲು ಪ್ರೇರೇಪಿಸಿದರು. ಪಟ್ಟಮ್ಮಾಳರು ಸರ್ಕಾರ ನಡೆಸುವ

ಪರೀಕ್ಷೆಗಾಗಿ ತಮ್ಮ ತಂದೆ ಹಾಗೂ ತಮ್ಮ ಸಂಗೀತ ಗುರುಗಳೊಡನೆ ಮದರಾಸಿಗೆ ಬಂದರು. ಪ್ರಖ್ಯಾತ ಸಂಗೀತಗಾರರಾದ ಪ್ರೊ. ಸಾಂಬಮೂರ್ತಿ, ಟೈಗರ್ ವರದಾಚಾರಿಯಾರ್ ಹಾಗೂ 'ದಂತಕತೆ' ಎಂದೇ ಹೆಸರಾದ ಮುತ್ತುಸ್ವಾಮಿ ದೀಕ್ಷಿತರ ಮೊಮ್ಮಗ ಅಂಬಿ ದೀಕ್ಷಿತರು ಪರೀಕ್ಷಕರಾಗಿದ್ದರು. ಪಟ್ಟಮ್ಮಾಳ್ ಸಂಪೂರ್ಣ ಆತ್ಮ ವಿಶ್ವಾಸದಿಂದ ಪರೀಕ್ಷೆ ಎದುರಿಸಿದರು. ಅಂಬಿ ದೀಕ್ಷಿತರ ಪ್ರಶ್ನೆಗೆ ಉತ್ತರವಾಗಿ **'ಶ್ರೀಸುಬ್ರಹ್ಮಣ್ಯಾ ನಮಸ್ತೆ'** ಎಂಬ ಮುತ್ತುಸ್ವಾಮಿ ದೀಕ್ಷಿತರು ರಚಿಸಿದ ಕಾಂಭೋಜಿರಾಗದ ಕೃತಿಯನ್ನು ಹಾಡಿದರು. ಹುಲಿ ವರದಾಚಾರಿಯಾರ್ ನಿರ್ದೇಶನದಂತೆ **'ನಾ ಜೀವಧಾರಾ'** ಎಂಬ ಬಿಲಹರಿ ರಾಗದ ಕೃತಿಯನ್ನು ಪ್ರಸ್ತುತ ಪಡಿಸಿದರು. ಪರೀಕ್ಷಕರುಗಳಿಗೆ ಸಣ್ಣ ವಯಸ್ಸಿನ ಪಟ್ಟಮ್ಮಾಳರ ಸಂಗೀತ ಜ್ಞಾನದಿಂದ ಸಖೇದಾಶ್ಚರ್ಯವಾಯಿತು. ಅಂಬಿ ದೀಕ್ಷಿತರು ಪರೀಕ್ಷೆಯ ನಂತರ ಪಟ್ಟಮ್ಮಾಳರಿಗೆ ಅಲ್ಲಿಯೇ ಎರಡು ವಾರಗಳ ಕಾಲ ತರಬೇತಿ ನೀಡಲು ಸೂಚಿಸಿದರು. ತಂದೆಯೊಡನೆ ಪಟ್ಟಮ್ಮಾಳ್ ಮದರಾಸಿನಲ್ಲಿ ಉಳಿದರು. ಅಂಬಿ ದೀಕ್ಷಿತರಂತಹ ಜ್ಞಾನಿಗಳಲ್ಲಿ ತರಬೇತಿ ಪಡೆದದ್ದು ಪಟ್ಟಮ್ಮಾಳರ ಸುಕೃತ. ಅಂಬಿಯವರ ಧ್ವನಿಯು ಸುಶ್ರಾವ್ಯವಾಗಿದ್ದು ಅವರ ಶೈಲಿಯಲ್ಲಿ ಭವ್ಯತೆಯಿತ್ತು. ಪ್ರತಿ ಸ್ವರದಲ್ಲೂ ಭಾವ ತುಂಬ ಬಲ್ಲ ಪರಿಣತಿ ಅವರಲ್ಲಿತ್ತು. ಪಟ್ಟಮ್ಮಾಳರು ಅವರಿಂದ **'ಬಾಲಗೋಪಾಲ', 'ಕಂಜದಳಾಯತಾಕ್ಷಿ'** ಎಂಬ ಹಾಡುಗಳನ್ನು ಅಭ್ಯಾಸ ಮಾಡಿದರು. ಅಂಬಿಯವರ ವೈದುಷ್ಯ, ಪಾಂಡಿತ್ಯಗಳು ಪಟ್ಟಮ್ಮಾಳರ ಮೇಲೆ ಆಳವಾದ ಪರಿಣಾಮಗಳನ್ನು ಮಾಡಿದ್ದವು. ಆಕೆ ಸದಾ ಅಂಬಿಯವರ ನಿರೀಕ್ಷೆಗೆ ತಕ್ಕಂತೆ ಹಾಡಲು ಪ್ರಯತ್ನಿಸುತ್ತಿದ್ದರು. ಅಂಬಿಯವರಿಗೂ ಈ ಶಿಷ್ಯೆಯಲ್ಲಿ ವಾತ್ಸಲ್ಯ, ನಂಬಿಕೆ ಮೂಡಿತ್ತು. ಹದಿನೈದು ದಿನಗಳು ಕ್ಷಣಗಳಂತೆ ಕಳೆದು ಹೋದವು. ಮಹಾನ್ ಗುರುವಿನಿಂದ ಅಗಲಿ ಕಂಚಿಗೆ ಮನಸ್ಸಿಲ್ಲದ ಮನಸ್ಸಿನಿಂದ ಹಿಂತಿರುಗಿದರು.

## ಮೊದಲ ನಿರೂಪಣೆ:

ಮೊದಲ ಬಾರಿ ಪಟ್ಟಮ್ಮಾಳ್ 1933ರಲ್ಲಿ ಮದರಾಸಿನ **ಎಗ್ಮೋರ್ ಲೇಡೀಸ್ ಕ್ಲಬ್**‌ನಲ್ಲಿ ಹಾಡಿದರು. ಹಿಂದೆ ಬೇಸಿಗೆ ಶಾಲೆಯ ವತಿಯಿಂದ ಎರಡು ಬಾರಿ ವೇದಿಕೆಯಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದರೂ ಮೊದಲ ಬಾರಿ ಮೃದಂಗ ಹಾಗೂ ವಯಲಿನ್ ಪಕ್ಕ ವಾದ್ಯಗಳೊಂದಿಗೆ ಸಂಗೀತ ಗೋಷ್ಠಿ ನೀಡಬೇಕಿತ್ತು.

ಪಕ್ಕ ವಾದ್ಯಗಳೊಡನೆ ಹಾಡುವ ಅಭ್ಯಾಸ ಆಕೆಗೆ ಇರಲಿಲ್ಲ. ಆದರೂ ಪಟ್ಟಮ್ಮಾಳ್ ಹಿಂದೆ ತಾವು ಕೇಳಿದ ಕಚೇರಿಗಳಲ್ಲಿ ಗಮನಿಸಿದ್ದಂತೆ ತಾವೂ ಹಾಡುಗಾರಿಕೆ ಆರಂಭಿಸಿದರು. ಇದು ಅವರ ಮೊದಲ ಸುದೀರ್ಘ ಕಾರ್ಯಕ್ರಮವಾಗಿತ್ತು. ಕೃಷ್ಣಸ್ವಾಮಿ ದೀಕ್ಷಿತರು ಮಗಳ ಕಾರ್ಯಕ್ರಮಗಳ ಆಯೋಜನೆಗಾಗಿ ಬಹಳ ಶ್ರಮವಹಿಸಿದರು. ಮಗಳು ಸತತ ಪರಿಶ್ರಮದಿಂದ ಅಭ್ಯಾಸ ಮಾಡುವುದನ್ನು ದೃಢಪಡಿಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ದೊರೆತ ಮನ್ನಣೆಗೆ ಪಟ್ಟಮ್ಮಾಳ್ ಭಾವೋದ್ರೇಕ ಹೊಂದಿ ಪುಳಕಿತರಾದರು. ಆ ಕಾರ್ಯಕ್ರಮವು ಅಚ್ಚುಕಟ್ಟಾಗಿ ಆಯೋಜಿಸಲ್ಪಟ್ಟು ಸ್ತ್ರೀ ಪ್ರೇಕ್ಷಕರನ್ನು/ ಕೇಳುಗರನ್ನು ಒಳಗೊಂಡಿತ್ತು. ಪಟ್ಟಮ್ಮಾಳರ ಮನಸ್ಸಿನಲ್ಲಿ ಉಂಟಾದ ಸಣ್ಣ ಉದ್ವೇಗವು ಕ್ಷಣ ಮಾತ್ರದಲ್ಲಿ ಮರೆಯಾಯಿತು. ಪ್ರತಿ ಹಾಡನ್ನು ಹಾಡುವಾಗಲೂ ಅವರ ಆತ್ಮ ವಿಶ್ವಾಸ ಹೆಚ್ಚುತ್ತಿತ್ತು. ಅವರ ಮೊದಲ ಕಾರ್ಯಕ್ರಮ ಬಹುದೊಡ್ಡ ಯಶಸ್ಸು ಕಂಡಿತು. ಶ್ರೋತೃಗಳು ಪಟ್ಟಮ್ಮಾಳರನ್ನು ಅಭಿನಂದಿಸಿ ಆನಂದಕರವಾದ ಗಾಯನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದ ಒಂದು ಚಿಕ್ಕ ಹುಡುಗಿ ವೇದಿಕೆ ಹತ್ತಿ ಕಾರ್ಯಕ್ರಮ ನಡೆಸಿ ಕೊಟ್ಟಿದ್ದು ಐತಿಹಾಸಿಕ ಮೈಲುಗಲ್ಲಾಯಿತು.

### ಕಾಂಚಿಪುರದಿಂದ ಮದರಾಸಿಗೆ:

ಪಟ್ಟಮ್ಮಾಳರ ಮೊದಲ ಸಂಗೀತ ನಿರೂಪಣೆಯ ಯಶಸ್ಸಿನಿಂದ ಮದರಾಸಿಗೆ ಹಲವಾರು ಸಂಗೀತ ಸಭಾಗಳಿಂದ ಆಹ್ವಾನ ಬರಲು ಆರಂಭಿಸಿತು. ಕೃಷ್ಣಸ್ವಾಮಿ ದೀಕ್ಷಿತರು ಇದರಿಂದ ಗಲಿಬಿಲಿಗೊಂಡರೂ ಸಂಸಾರವನ್ನು ಕಂಚಿಯಿಂದ ಮದರಾಸಿಗೆ ವರ್ಗಾಯಿಸುವ ದೃಢ ನಿರ್ಧಾರ ಕೈಗೊಂಡರು. ಇದರಿಂದ ಹೆಚ್ಚು ಹೆಚ್ಚು ಕಾರ್ಯಕ್ರಮಗಳಿಗೆ ಆಹ್ವಾನ ಸಿಗುವುದು ಅಲ್ಲದೆ ಮದರಾಸಿನಲ್ಲಿದ್ದ ಹೆಸರಾಂತ ಸಂಗೀತಗಾರರಿಂದ ಸಂಗೀತವನ್ನು ಕಲಿಯುವ ಅವಕಾಶವೂ ದೊರೆಯುವುದು ಎಂಬ ವಿಚಾರ ಕೃಷ್ಣಸ್ವಾಮಿ ದೀಕ್ಷಿತರಿಗೆ ಬಂದಿತ್ತು. ಅವರ ಆರ್ಥಿಕ ಸ್ಥಿತಿಯು ಪಟ್ಟಮ್ಮಾಳರಿಗೆ ಖ್ಯಾತಿವೆತ್ತ ಗುರುಗಳಿಂದ ತರಬೇತಿ ಕೊಡಿಸಲು ಅಸಮರ್ಥವಾಗಿತ್ತು. ಹಾಗೆಯೇ ಅಂದಿನ ಸಾಮಾಜಿಕ ಪರಿಸರವೂ ಕಲಿಕೆಗೆ ಪೂರಕವಾಗಿರಲಿಲ್ಲ. ಮದರಾಸಿಗೆ ಬಂದ ನಂತರ ಸಂಗೀತಜ್ಞರ ಶಿಷ್ಯರುಗಳಿಂದ ಪಟ್ಟಮ್ಮಾಳ್ ಸಂಗೀತ ಕಲಿಯಬೇಕಾಯಿತು. ಅರಿಯಕುಡಿ ರಾಮಾನುಜ ಅಯ್ಯಂಗಾರ್

ಶಿಷ್ಯರಾದ ವೈದ್ಯನಾಥನ್, ನೈನಾ ಪಿಳ್ಳೈ ಅವರ ಶಿಷ್ಯರಾದ ಕೃಷ್ಣಸ್ವಾಮಿ ಅಯ್ಯಂಗಾರರಲ್ಲಿ ಪಟ್ಟಮ್ಮಾಳ್ ಶಿಷ್ಯ ವೃತ್ತಿ ನಡೆಸಿದರು. ಹಲವು ವರ್ಣ, ಕೃತಿಗಳನ್ನು ಕೃಷ್ಣಸ್ವಾಮಿ ಅಯ್ಯಂಗಾರರಲ್ಲಿ ಆಕೆ ಕಲಿತರು. ಮಹಾನ್ ಸಂಗೀತಗಾರರ ಶಿಷ್ಯರಲ್ಲಿ ಸಂಗೀತಾಭ್ಯಾಸ ನಡೆಸಿದ್ದರಿಂದ ಆ ಇಬ್ಬರೂ ಸಂಗೀತದ ದೈತ್ಯ ಪ್ರತಿಭೆಗಳ ಶೈಲಿಯನ್ನು ಪರೋಕ್ಷವಾಗಿ ಪಟ್ಟಮ್ಮಾಳ್ ಕಲಿತರು. ಅಂಬಿ ದೀಕ್ಷಿತರು ತಮಗೆ ಪರಿಚಯಿಸಿದ ಜಸ್ಟೀಸ್ ಟಿ.ಎಲ್. ವೆಂಕಟರಾಮ ಅಯ್ಯರ್ ಅವರಿಂದ ಪಟ್ಟಮ್ಮಾಳರಿಗೆ ಮುತ್ತುಸ್ವಾಮಿ ದೀಕ್ಷಿತರ ನೂರಾರು ಕೃತಿಗಳ ಪಾಠವಾಯಿತು. ಸಂಗೀತ ಪಾಠದ ಕಲಿಕೆಯು ಪ್ರಯಾಸಕರವಾಗಿತ್ತು. ಇಂದಿನ ಯಾವುದೇ ಶ್ರವ್ಯ-ದೃಶ್ಯ ಮಾಧ್ಯಮಗಳು ಆಗ ಇರಲಿಲ್ಲ. ಜ್ಞಾಪಕ ಶಕ್ತಿಯ ಆಧಾರದ ಮೇಲೆ ಹಾಡುಗಳನ್ನು ಮತ್ತೆ ಮತ್ತೆ ಹಾಡುತ್ತಾ ಅಭ್ಯಾಸ ಮಾಡಬೇಕಾಗಿತ್ತು. ಆಕೆಯ ಗಮನ ಸದಾ ಸಂಗೀತಾಭ್ಯಾಸದಲ್ಲೇ ಕೇಂದ್ರೀಕೃತವಾಗಿರುತ್ತಿತ್ತು. ಇಂತಹ ಕಠಿಣವಾದ ತರಬೇತಿಗಳಿಂದ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಸಮರ್ಥವಾಗಿ ಹಾಡಬಲ್ಲ ಕಲೆ ಅವರಿಗೆ ಸಿದ್ಧಿಸಿತು.

ಪಟ್ಟಮ್ಮಾಳರ ಮೊದಲ ಪ್ರಯತ್ನ ಯಶಸ್ವಿಯಾಗಿ ಕರ್ನಾಟಕ ಸಂಗೀತ ಗೋಷ್ಠಿಗಳಲ್ಲಿ ಇತಿಹಾಸವನ್ನೇನೋ ನಿರ್ಮಿಸಿತು. ಆದರೆ ಅಂದಿನ ಸಮಾಜದ ಕಟ್ಟುಪಾಡುಗಳು, ರೀತಿ-ನೀತಿಗಳು ಒಬ್ಬ ಸಂಪ್ರದಾಯಸ್ಥ ಮನೆತನದ ಹೆಣ್ಣು ಮಗಳು ವೇದಿಕೆ ಹತ್ತುವುದನ್ನು ಸಹಿಸಲಿಲ್ಲ. ಸಂಗೀತ, ನೃತ್ಯಗಳು ಸಂಸ್ಕೃತಿಯ ಅವಿಭಾಜ್ಯ ಅಂಗಗಳೇ ಆದರೂ ಸಾರ್ವಜನಿಕವಾಗಿ ಹೆಣ್ಣು ಮಕ್ಕಳು ಕಚೇರಿ ನೀಡುವುದು ಸಾಧ್ಯವಿರಲಿಲ್ಲ. ದೇವದಾಸಿಯರಿಗೆ ಮಾತ್ರ ಸಂಗೀತ, ನೃತ್ಯ ಎಂಬ ಭಾವ ಬಲವಾಗಿ ಬೇರೂರಿತ್ತು. ಪುರುಷರಿಗೂ ಸಂಗೀತವನ್ನು ವೃತ್ತಿಯಾಗಿ ಸ್ವೀಕರಿಸುವುದು ಮರ್ಯಾದೆ ತರುವಂತಹದ್ದಲ್ಲ ಎಂದು ಭಾವಿಸಲಾಗಿತ್ತು. ಸಂಗೀತವು ಮನುಷ್ಯನ ಮನ ತಣಿಸುವ ಸಾಧನವೇ ಆದರೂ ಸಂಪ್ರದಾಯಸ್ಥರು ಅದನ್ನು ತುಂಬು ಮನಸ್ಸಿನಿಂದ ಪ್ರೋತ್ಸಾಹಿಸುತ್ತಿರಲಿಲ್ಲ. ಚಿತ್ರ ಕಲೆ, ಶಿಲ್ಪಕಲೆಗಳಂತೆ ಸಂಗೀತ-ನೃತ್ಯಗಳೂ ಕಲೆ ಎಂಬ ಭಾವನೆ ಇರಲಿಲ್ಲ. ಹಾಗಾಗಿ ಅವುಗಳಿಗೆ ಉತ್ತೇಜನ ನೀಡುವ ಪ್ರಸಂಗಗಳೇ ಒದಗುತ್ತಿರಲಿಲ್ಲ.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಕೃಷ್ಣಸ್ವಾಮಿ ದೀಕ್ಷಿತರು ಮತ್ತು ಪಟ್ಟಮ್ಮಾಳರು ವಿಚಲಿತರಾದರೂ ಸಹ ತಮ್ಮ ಆತ್ಮವಿಶ್ವಾಸ ಹಾಗೂ

ಧೈರ್ಯಗಳಿಂದ ಅದನ್ನು ಸಮರ್ಥವಾಗಿ ನಿಭಾಯಿಸಿದ ಪರಿ ಸ್ತುತ್ಯರ್ಹ. ಸಾಮಾಜಿಕ ನಿಷಿದ್ಧಗಳನ್ನು ಮೀರಿ ಪಟ್ಟಮ್ಮಾಳ್ ತಮ್ಮದೇ ಆದ ಒಂದು ಶೈಲಿಯನ್ನು ನಿರ್ಮಾಣ ಮಾಡಿದರು. ತಮ್ಮ ಸಹವರ್ತಿ ಖ್ಯಾತ ನೃತ್ಯಪಟು ರುಕ್ಮಿಣೀದೇವಿಯವರಂತೆ ಸಮಾಜದ ಕಟ್ಟುಪಾಡುಗಳಿಗೆ ವಿರುದ್ಧವಾಗಿ ನಡೆದು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿದರು. ಇದಕ್ಕಿಂತಲೂ ಆಗ ಇದ್ದಂತಹ ಮತ್ತೊಂದು ಅಡ್ಡಿ ಎಂದರೆ ಪುರುಷ ಪ್ರಧಾನತೆ. ಕರ್ನಾಟಕ ಸಂಗೀತ ಸಾಮ್ರಾಜ್ಯದಲ್ಲಿ ಪುರುಷ ಸರಸ್ವತಿಗಳು ತುಂಬಿಕೊಂಡು ತಮ್ಮ ಹೆಚ್ಚುಗಾರಿಕೆಯನ್ನು ಸದಾ ಮೆರೆಸುತ್ತಿದ್ದರು. ಸಂಗೀತಗಾರರು ಮಹಿಳಾ ಹಾಡುಗಾರರು ರಾಗ, ಕೀರ್ತನೆ, ಜಾವಳಿ ಮತ್ತು ಪದಗಳನ್ನು ಮಾತ್ರ ಹಾಡಬೇಕು, ಆದರೆ ಪಲ್ಲವಿ, ಕಲ್ಪನ ಸ್ವರಗಳನ್ನು ಹಾಡುವಂತಿಲ್ಲ ಎಂಬ ಅಲಿಖಿತ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಪಲ್ಲವಿ ಹಾಗೂ ಕಲ್ಪನ ಸ್ವರಗಳನ್ನು ಹಾಡಲು ಅಪಾರ ಬುದ್ಧಿಮತ್ತೆ ಹಾಗೂ ಕಲಾ ಪ್ರೌಢಿಮೆ ಇರಬೇಕೆಂದು ಅವರು ಅಭಿಪ್ರಾಯಪಡುತ್ತಿದ್ದರು. ಮಹಿಳೆಯರಿಗೆ ಪಲ್ಲವಿ ಹಾಡುವ, ವಿಸ್ತರಿಸುವ ಆಲೋಚನಾ ಶಕ್ತಿ ಮತ್ತು ಸೃಜನಶೀಲತೆಗಳು ಇಲ್ಲವೆಂಬುದು ಅವರ ನಂಬಿಕೆಯಾಗಿತ್ತು. ಮಹಿಳೆಯರ ಸಂಗೀತವನ್ನು ಕಡೆಗಣನೆಯಿಂದ ನೋಡಲಾಗುತ್ತಿತ್ತು. ಪಟ್ಟಮ್ಮಾಳರು ಈ ಎಲ್ಲ ಅಡೆ-ತಡೆಗಳನ್ನು ನಿವಾರಿಸಿಕೊಂಡು **'ಪಲ್ಲವಿ'** ಹಾಡುವಲ್ಲಿ ಪರಿಣತಿ ಸಾಧಿಸಿದರು. ಅವರನ್ನು **'ಪಲ್ಲವಿ ಪಟ್ಟಮ್ಮಾಳ್'** ಎಂದೇ ಜನ ಗುರುತಿಸುವಂತಹ ಮೇರು ಸಾಧನೆ ಮಾಡಿದರು. ಮಹಿಳೆಯರ ಸಂಗೀತದ ಬಗ್ಗೆ ಇದ್ದಂತಹ ಧೋರಣೆಯನ್ನು ಪಟ್ಟಮ್ಮಾಳ್ ಪ್ರಜ್ಞಾಪೂರ್ವಕವಾಗಿ ತಿರಸ್ಕರಿಸಿದರು.

## ವಿವಾಹ ಬಂಧನ:

ಪಟ್ಟಮ್ಮಾಳರು 1940ರಲ್ಲಿ ಈಶ್ವರನ್ ಅವರನ್ನು ವರಿಸಿದರು. ವೈಯಕ್ತಿಕವಾಗಿ ಹಾಗೂ ವೃತ್ತಿ ಜೀವನದಲ್ಲಿ ಇದು ಒಂದು ಮೈಲಿಗಲ್ಲಾಯಿತು. ತಂದೆ ಪಟ್ಟಮ್ಮಾಳರಿಗೆ ಸಂಗೀತ ಸಾಧನೆಗೆ ಸ್ಫೂರ್ತಿಯಾದಂತೆ, ಪತಿ ಈಶ್ವರನ್ ಅವರೂ ಬೆಂಬಲ, ಸಹಕಾರ ನೀಡಿದರು. ಇವರಿಬ್ಬರ ಕುಟುಂಬಗಳೂ ಕಾಂಚೀಪುರದಲ್ಲಿ ನೆರೆ-ಹೊರೆಯಲ್ಲಿ ಇದ್ದ ಕಾರಣ ಎರಡೂ ಕುಟುಂಬಗಳಲ್ಲಿ ಉತ್ತಮ ಬಾಂಧವ್ಯವಿತ್ತು. ಈಶ್ವರನ್ ಅವರು ಪೊಳ್ಳಾಚಿ ಮುನಿಸಿಪಲ್ ಎಲೆಕ್ಟ್ರಿಸಿಟಿ ಇಲಾಖೆಯಲ್ಲಿ ಎಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದರು. 1942ರಲ್ಲಿ

ದಂಪತಿಗಳು ಮದರಾಸಿಗೆ ಬಂದರು. ಅಲ್ಲಿ ಈಶ್ವರನ್ ಸಿ.ಪಿ.ಡಬ್ಲ್ಯೂ.ಡಿ. ಸೇರಿದರು. 1944ರಲ್ಲಿ ಈಶ್ವರನ್ ಒಂದು ಮಹತ್ವದ ನಿರ್ಧಾರ ಕೈಗೊಂಡರು. ತಮ್ಮ ವೃತ್ತಿಯನ್ನು ತ್ಯಜಿಸಿ ಪಟ್ಟಮ್ಮಾಳರ ಸಂಗೀತ ಸಾಧನೆಯ ಅಭಿವೃದ್ಧಿಗಾಗಿ ಶ್ರಮಿಸತೊಡಗಿದರು. ಪಟ್ಟಮ್ಮಾಳರ ಸಂಗೀತ ಗೋಷ್ಠಿಗಳ ನಿರ್ವಹಣೆ ಮಾಡಲಾರಂಭಿಸಿದರು.

ಪಟ್ಟಮ್ಮಾಳರು ಪಲ್ಲವಿಗಳನ್ನು ಹಾಡುವುದರಲ್ಲಿ ನೈಪುಣ್ಯ ಸಾಧಿಸಿದ್ದು ಹೇಗೆ? ಮೊದಲಿಗೆ ಚಿಕ್ಕಂದಿನಲ್ಲಿ ನೈನಾ ಪಿಳ್ಳೈ ಅವರ ಗಾಯನಗಳನ್ನು ಕೇಳುತ್ತಿದ್ದರಿಂದ ಆಕೆ ಸ್ಫೂರ್ತಿಗೊಂಡಿದ್ದರು. ಪಟ್ಟಮ್ಮಾಳ್ ತಮ್ಮ ಎಲ್ಲ ಗಾನಗೋಷ್ಠಿಗಳಲ್ಲಿ ನೈನಾ ಪಿಳ್ಳೈ ಹಾಡುತ್ತಿದ್ದ ಪಲ್ಲವಿ 'ನೆಂಜೆ ನೀನ್ನೈ ಅನ್ಬೆ ಟುಡಿ ನೇರಿ ನೀ ಗುರುಪರಮೆ' ಕೃತಿಯನ್ನು ತಪ್ಪದೇ ಹಾಡುತ್ತಿದ್ದರು. ಮುಂದಿನ ವರ್ಷಗಳಲ್ಲಿ ಕ್ಲಿಷ್ಟಕರ ಹಾಗೂ ಸಂಕೀರ್ಣ ಪಲ್ಲವಿಗಳನ್ನು ತಿರುಪತಿಯ ನರಸಿಂಹಲು ನಾಯ್ಡು ಅವರಲ್ಲಿ ಅಭ್ಯಾಸ ಮಾಡಿದರು. ಅಪಾರ ಸಹನೆ, ದೃಢ ಸಂಕಲ್ಪ ಹಾಗೂ ಕಠಿಣ ಅಭ್ಯಾಸ ಇವುಗಳೇ ಅವರ ಯಶಸ್ಸಿನ ಗುಟ್ಟಾಗಿದ್ದಿತು. ಅಲ್ಲಿಯವರೆಗೂ ಪುರುಷರಿಗೆ ಮಾತ್ರ ಮೀಸಲಾಗಿದ್ದ ಕ್ಷೇತ್ರಕ್ಕೆ ಪಟ್ಟಮ್ಮಾಳ್ ಲಗ್ಗೆಯಿಟ್ಟರು.

ಪಟ್ಟಮ್ಮಾಳರ ಮೇಲೆ ಸಂಗೀತ ದಿಗ್ಗಜ ಅರಿಯಕುಡಿ ರಾಮಾನುಜ ಅಯ್ಯಂಗಾರ್ ಪ್ರಭಾವವನ್ನು ವಿಶೇಷವಾಗಿಯೇ ದಾಖಲಿಸಬೇಕು. ಕಾಂಚೀಪುರದ ತ್ಯಾಗರಾಜರ ಆರಾಧನೆ ಉತ್ಸವಗಳಲ್ಲಿ ಪಟ್ಟಮ್ಮಾಳ್ ಎಳೆಯ ಹರೆಯದಲ್ಲಿ ಅವರ ಸಂಗೀತ ಗೋಷ್ಠಿಗಳನ್ನು ಆಲಿಸುತ್ತಿದ್ದರು. ಕೇವಲ ಒಮ್ಮೆ ಆಲಿಸಿದ ಮಾತ್ರದಿಂದಲೇ ಆಕೆ ಅದೇ ರೀತಿ ಅಭ್ಯಾಸ ಮಾಡುತ್ತಿದ್ದರು. ಅವರ ಶೈಲಿ, ಸೃಜನ ಶೀಲತೆಯಿಂದ ಕೂಡಿದ್ದರೂ ಸಂಪ್ರದಾಯದ ಚೌಕಟ್ಟಿನಲ್ಲೇ ಅಡಕವಾಗಿರುತ್ತಿತ್ತು. ಪಟ್ಟಮ್ಮಾಳ್ ಅರಿಯಕುಡಿಯವರ ಶಿಷ್ಯರಾದ ವೈದ್ಯನಾಥನ್ ಅವರಿಂದ ಕಲಿತದ್ದರಿಂದ ಪರೋಕ್ಷವಾಗಿ ಅವರ ಶಿಷ್ಯರೇ ಆದರು. ಅರಿಯಕುಡಿಯವರ ಕೆಲವು ಹಾಡುಗಳನ್ನು ರೇಡಿಯೋದಲ್ಲಿ ಕೇಳುವ ಮೂಲಕ ಆಕೆ ಕಲಿತರು. ಅರಿಯ ಕುಡಿಯವರ ಪ್ರಸಿದ್ಧ ಹಾಡು 'ಯಾರೋ ಇವರ್ ಯಾರೋ' ಎಂಬ ಹಾಡನ್ನು ಹೀಗೆಯೇ ಕಲಿತರು. ಅರಿಯಕುಡಿಯವರ ಹಲವಾರು ಹಾಡುಗಳು ಅನುಕರಿಸಲು ಅಸಾಧ್ಯವಾಗಿತ್ತು. ಅಂತಹ ಹಾಡುಗಳನ್ನು ಪರಿಶ್ರಮದಿಂದ ಕಲಿತರು. ಅರಿಯ ಕುಡಿಯವರಂತೆ

ನಿಧಾನಗತಿಯ ತಾಳಗಳನ್ನು ಬಳಸಿ ಹಾಡುತ್ತಿದ್ದುದು ಅವರ ಗಾಯನಕ್ಕೆ ಒಂದು ರೀತಿಯ ಗಾಂಭೀರ್ಯವನ್ನು ನೀಡುತ್ತಿತ್ತು. ಪಟ್ಟಮ್ಮಾಳರ ಕಚೇರಿಗಳು ಅರಿಯಕುಡಿ ಹಾಗೂ ನೈನಾ ಪಿಳ್ಳೈಯವರ ರೀತಿಯಲ್ಲಿಯೇ ವಿನ್ಯಾಸವಾಗಿರುತ್ತಿದ್ದವು. ಅವರ ಆದರ್ಶ ಕಚೇರಿಗಳಲ್ಲಿ ವರ್ಣ, ಕೃತಿಗಳು ಮತ್ತು ರಾಗಂ–ತಾನಂ–ಪಲ್ಲವಿ, ಕೆಲವು ಜಾವಳಿಗಳು ಮತ್ತು ಪದಗಳಿರುತ್ತಿದ್ದವು. ಕೆಲ ಸಂದರ್ಭಗಳಲ್ಲಿ ಆಕೆ ತಿಲ್ಲಾನ, ದೇಶ ಭಕ್ತಿಗೀತೆಗಳು ಹಾಗೂ ಕೆಲವು ಹಾಡುಗಳನ್ನು ಸೇರಿಸಿಕೊಳ್ಳುತ್ತಿದ್ದರು.

## ಸಂಪ್ರದಾಯದ ಮುರಿದು ಕಟ್ಟುವಿಕೆ:

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಅಲ್ಲಿಯವರೆಗೂ ಪಲ್ಲವಿಯ ಹಾಡುವಿಕೆ ಕೇವಲ ಪುರುಷರಿಗೆ ಮಾತ್ರ ಮೀಸಲಾಗಿತ್ತು. ಪಟ್ಟಮ್ಮಾಳ್ ಆ ಸಂಪ್ರದಾಯವನ್ನು ಮುರಿದ ಮೊದಲ ಮಹಿಳೆ. ತಮ್ಮ ಕಚೇರಿಗಳಲ್ಲಿ ಪಲ್ಲವಿಯ ವಿಸ್ತರಣೆಯನ್ನೇ ಪ್ರಮುಖವಾಗಿಸಿಕೊಂಡು ಹೊಸ ಪದ್ಧತಿಗೆ ನಾಂದಿ ಹಾಡಿದರು. ಸಂಗೀತ ಗೋಷ್ಠಿಗಳಲ್ಲಿ ಸುಮಾರು ಎರಡು ಗಂಟೆಗಳ ಕಾಲ ಪಲ್ಲವಿಯನ್ನೇ ಹಾಡಬಲ್ಲ ಸಾಮರ್ಥ್ಯ ಅವರದ್ದಾಗಿತ್ತು. 1940ರ ಮಧ್ಯ ಭಾಗದ ಹೊತ್ತಿಗೆ ಪಟ್ಟಮ್ಮಾಳ್ ಅವರು ಕ್ಲಿಷ್ಟಕರವಾದ, ಸಂಕೀರ್ಣವಾದ ಪಲ್ಲವಿಗಳನ್ನು ಹಾಡುವ ಕಲೆಯಲ್ಲಿ ನಿಷ್ಣಾತರಾದರು. ಅಂದಿನ ಕಲಾಭಿಜ್ಞರು ಪಟ್ಟಮ್ಮಾಳ್‌ರ ಪರಿಣತಿಯನ್ನು ಅವರ ಪ್ರಯತ್ನಗಳನ್ನು ಶ್ಲಾಘಿಸುವ ಮಟ್ಟಕ್ಕೆ ಆಕೆ ಬೆಳೆದರು. ಸಂಗೀತದ ಶಾಸ್ತ್ರೀಯತೆ, ಸಾಂಪ್ರದಾಯಿಕತೆಗಳ ಕುರಿತು ಅವರಿಗಿದ್ದ ಬದ್ಧತೆಯೇ ಅವರ ನಮ್ರತೆ, ಗುಣಶೀಲತೆಗಳನ್ನು ತೋರಿಸುತ್ತಿದ್ದವು. ಕೇವಲ ಹೆಸರು ಗಳಿಸಲಿಕ್ಕೆ ಆಕೆ ಸಂಪ್ರದಾಯವನ್ನು ಮುರಿಯಲಿಲ್ಲ. ಅವರ ಪಲ್ಲವಿ ಹಾಡುವಿಕೆಯು ಅವರ ಸಾಮರ್ಥ್ಯ ಹಾಗೂ ಮೂರು ತಾಳಗತಿಗಳಿಗೆ ಹೊಂದಬಲ್ಲ ಅವರ ಪರಿಣತಿಯನ್ನು ಮನಗಾಣಿಸುತ್ತವೆ. ಚೌಕಕಾಲ, ಮಧ್ಯಮಕಾಲ ಹಾಗೂ ದುರಿತ ಕಾಲಗಳಲ್ಲಿ ಹಾಡಬಲ್ಲ ಶಕ್ತಿಯಿದ್ದರೂ ಆಕೆ ಸಾಮಾನ್ಯವಾಗಿ ಮೊದಲೆರಡು ತಾಳಗತಿಗಳಿಗೇ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದರು. 'ಕನಕ್ಕು ಸ್ವರ' (Proportionate)ಗಳನ್ನು ಹಾಡುವಲ್ಲಿಯೂ ನೈಪುಣ್ಯವಿತ್ತು. 'ಕುರೈಪ್ಪು' ಹಾಡುವಲ್ಲಿ ಅದನ್ನು ನಿಭಾಯಿಸುವ ಅವರ ಪ್ರೌಢಿಮೆಗೆ ಅಂದಿನ ಸಂಗೀತ ದಿಗ್ಗಜಗಳೇ ಬೆರಗಾಗಿದ್ದರು. ಖ್ಯಾತ ಸಂಗೀತಗಾರರ ಮೆಚ್ಚುಗೆಗೆ ಅವರ ಪ್ರತಿಭೆ ಪಾತ್ರವಾಗಿತ್ತು.

ಮಾದರಿ ಸಂಗೀತ ಗೋಷ್ಠಿಗಳ ಬಗ್ಗೆ ಪಟ್ಟಮ್ಮಾಳರಿಗಿದ್ದ ಅಭಿಪ್ರಾಯಗಳನ್ನು ಇಲ್ಲಿ ದಾಖಲಿಸಬೇಕು. ಶ್ರುತಿಗಿಂತ ಲಯಕ್ಕೆ ಆಕೆ ಪ್ರಾಮುಖ್ಯತೆ ನೀಡುತ್ತಿದ್ದರು. ಒಳ್ಳೆಯ ಕಚೇರಿ ನಡೆಸಿಕೊಡಲು ಉತ್ತಮ ಶಾರೀರದ ಅವಶ್ಯಕತೆ ಇದೆಯೆಂದು ಆಕೆ ತಿಳಿದಿದ್ದರು. ಸಾಹಿತ್ಯದ ಅರ್ಥ ತಿಳಿದುಕೊಂಡೇ ಹಾಡಬೇಕೆಂದು ಆಕೆ ನಂಬಿದ್ದರು. ಇದರಿಂದ ರಚನಕಾರರ ಭಾವನೆಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಪದಗಳ ಸರಿಯಾದ ಉಚ್ಚಾರಣೆಯೂ ಅವಶ್ಯಕ, ಆದರೆ ಆಕೆ ತಮಗೆ ತೆಲುಗು, ಸಂಸ್ಕೃತ ಬಾರದ ಕಾರಣ ವಿಷಾದ ಹೊಂದಿದ್ದರು. ತೆಲುಗು, ಸಂಸ್ಕೃತ ಹಾಡುವಾಗ ಕಠಿಣವಾಗಿ ಅಭ್ಯಾಸ ನಡೆಸುತ್ತಿದ್ದರು. ತಂದೆಯವರಿಂದ ಸಂಸ್ಕೃತ ಶ್ಲೋಕಗಳನ್ನು ಸರಿಯಾದ ಉಚ್ಚಾರಣೆಯೊಂದಿಗೆ ಪಠಿಸಲು ಕಲಿತಿದ್ದರು. ಉಚ್ಚಾರಣೆಯಲ್ಲಿನ ಸಣ್ಣ ದೋಷವೂ ಅದರ ಅರ್ಥವನ್ನೇ ಬದಲಾಯಿಸಿಬಿಡಬಲ್ಲದು. ಹಾಡುಗಾರರು ಶ್ರೋತೃಗಳೊಡನೆ ವಿಶ್ವಾಸದ ಸಂಬಂಧ ಬೆಳೆಸಿಕೊಂಡರೆ ಸಂಗೀತವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದೆಂಬ ಸತ್ಯದ ಅರಿವು ಅವರಿಗಿತ್ತು. ಶ್ರೋತೃಗಳ ಪ್ರೋತ್ಸಾಹವೇ ಸಂಗೀತಗಾರರಿಗೆ ದೊರೆಯುವ ಉತ್ತೇಜನ ಎನ್ನುತ್ತಿದ್ದರು.

ಪಟ್ಟಮ್ಮಾಳ್ ಹಾಡುಗಳ ಅದ್ಭುತ ಸ್ಮರಣ ಶಕ್ತಿ ಹೊಂದಿದ್ದರು. ಚಿಕ್ಕಂದಿನಲ್ಲಿ ಕಲಿತ ಹಾಡುಗಳನ್ನು ಕಲಿತ ಹಾಗೆಯೇ ಹಾಡಬಲ್ಲವರಾಗಿದ್ದರು. ಯಾವ ಆಧುನಿಕ ಸಲಕರಣೆಗಳೂ ಇಲ್ಲದ ಆ ಕಾಲದಲ್ಲಿ ಕೇವಲ ಕಠಿಣ ಅಭ್ಯಾಸದಿಂದ ಸಂಗೀತವನ್ನು ರೂಢಿಸಿಕೊಂಡರು. ಹಾಡುಗಳನ್ನು ಅವು ಅಭಿವ್ಯಕ್ತಿಸುವ ಭಾವಗಳ ಸಮೇತ ತಮ್ಮ ಮನಸ್ಸಿನಲ್ಲಿ ಮುದ್ರಿಸಿಕೊಳ್ಳುತ್ತಿದ್ದರು. ಹಾಡುಗಳನ್ನು ಕೇಳುವುದಕ್ಕೆ ಅವರು ಪ್ರಾಮುಖ್ಯ ನೀಡುತ್ತಿದ್ದರು. ನಂತರ ಅದನ್ನೇ ಪುನರಾವರ್ತಿಸುತ್ತಿದ್ದರು. ಅವರ ಈ ಅಭ್ಯಾಸದಿಂದ ಸಾಹಿತ್ಯ ಮತ್ತು ಮಾಧುರ್ಯಗಳನ್ನು ಮೇಳೈಸಿ ಹಾಡಲು ಸಾಧ್ಯವಾಗುತ್ತಿತ್ತು. ಸಂಗೀತ ಮತ್ತು ಸಾಹಿತ್ಯಗಳು ಬೇರ್ಪಡಿಸಲಾಗದ ಸಂಗಾತಿಗಳೆಂದು ಅವರು ತಿಳಿದಿದ್ದರು. ಹಾಡಿನ ಅರ್ಥ ತಿಳಿದು ಹಾಡಿದರೆ ಮಾತ್ರ ರಸಾನುಭೂತಿ ಉಂಟಾಗುತ್ತದೆ. ಹಾಡಿನ ಅರ್ಥ ತಿಳಿದಾಗ ಭಾವ ಸ್ಫುರಿಸುತ್ತವೆ. ಆ ಭಾವವನ್ನು ಶ್ರೋತೃಗಳಿಗೆ ಸಮರ್ಥವಾಗಿ ತಲುಪಿಸಿದರೆ ಅವರೊಡನೆ ಒಂದು ಬಂಧ ಹುಟ್ಟುತ್ತದೆ. ತೆಲುಗು, ಸಂಸ್ಕೃತ ಹಾಗೂ ಕನ್ನಡ ಹಾಡುಗಳನ್ನು ಕಲಿಯುವಾಗ ಅವುಗಳ ಅರ್ಥದ ಬಗ್ಗೆ ಹೆಚ್ಚು ಆಸ್ಥೆಯಿಂದ ತಿಳಿಯುತ್ತಿದ್ದರು.

# ಸಂಗೀತ ಪಯಣ

## ಕಲಾ ಪ್ರಾವೀಣ್ಯ:

ಪಟ್ಟಮ್ಮಾಳರ ಸಂಗೀತ ಕಲಾ ಪ್ರವೀಣತೆಯು ವಿಸ್ತಾರವಾಗಿತ್ತು. ಇದಕ್ಕೆ ಅವರು ಹಲವು ಗುರುಗಳಲ್ಲಿ ಕಲಿತದ್ದು ಕಾರಣವಾಗಿರಬಹುದು. ಕರ್ನಾಟಕ ಸಂಗೀತದ ತ್ರಿಮೂರ್ತಿಗಳಾದ ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು ಹಾಗೂ ಶ್ಯಾಮಶಾಸ್ತ್ರಿಗಳ ರಚನೆಗಳನ್ನು ತಮ್ಮ ಕಚೇರಿಗಳಲ್ಲಿ ಬಳಸಿಕೊಂಡರೂ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಿಗೆ ಪ್ರಾಧಾನ್ಯ ನೀಡುತ್ತಿದ್ದರು. ಅಂಬಿ ದೀಕ್ಷಿತರು ಹಾಗೂ ಜಸ್ಟೀಸ್ ಟಿ.ಎಲ್. ವೆಂಕಟರಾಮ ಅಯ್ಯರ್‌ರವರಿಂದ ಕೃತಿಗಳನ್ನು ಕಲಿತಿದ್ದರು. ಪಾಪನಾಶಂ ಶಿವನ್ ಅವರಿಂದ ಅವರದೇ ರಚನೆಗಳ ಅಭ್ಯಾಸ ನಡೆಸಿದ್ದರು. ಗೋಪಾಲಕೃಷ್ಣ, ಭಾರತಿಯಾರರ ರಚನೆಗಳು ಅವರಿಗೆ ಪರಿಚಿತವಾಗಿದ್ದವು. ಅಪ್ಪಾದುರೈ ಆಚಾರ್ ಅವರು 'ತಿರುಪ್ಪು ಜಗ' ಹಾಗೂ 'ತೇವರಂ' ಅನ್ನು ಹೇಳಿಕೊಟ್ಟರು. ಭಾರತಿಯಾರರ ಅನೇಕ ಹಾಡುಗಳಿಗೆ ಪಟ್ಟಮ್ಮಾಳರೇ ರಾಗ ಸಂಯೋಜಿಸಿದ್ದರು. ತಿರುಪತಿ ನರಸಿಂಹಲು ನಾಯ್ಡು ಅವರಿಂದ ಹಲವಾರು ಪಲ್ಲವಿಗಳನ್ನು ಕಲಿತು ಪ್ರಾವೀಣ್ಯ ಸಾಧಿಸಿದರು..

ಅನ್ನಸ್ವಾಮಿ ಶಾಸ್ತ್ರಿ, ಸುಬ್ಬರಾಯ ಶಾಸ್ತ್ರಿ ಮತ್ತು ಪಟ್ನಂ ಸುಬ್ರಹ್ಮಣ್ಯ ಐಯ್ಯರ್ ಅವರುಗಳ ರಚನೆಗಳನ್ನೂ ಹಾಡುತ್ತಿದ್ದರು. ಇತ್ತೀಚಿನ ರಚನೆಕಾರರಲ್ಲಿ ಕೋಟೀಶ್ವರ ಅಯ್ಯರ್ ಹಾಗೂ ಶಂಕರ್ ಅಯ್ಯರ್ ಅವರ ಕೃತಿಗಳನ್ನು ಆಯ್ದುಕೊಳ್ಳುತ್ತಿದ್ದರು. ಅದ್ವಿತೀಯ, ಅನುಪಮ ಹಾಡುಗಾರಿಕೆಗೆ ಪಟ್ಟಮ್ಮಾಳ್ ಹೆಸರಾದರು. ಸೌಂದರರಾಜಂ (ಬೃಂದಾವನ ಸಂಗ), ಅಕ್ಷಯಲಿಂಗ (ಶಂಕರಾಭರಣ), ಮೀನಲೋಚನಿ (ಧನ್ಯಾಸಿ), ರಾನಿಧಿ (ಮಣಿರಂಗು), ಕೊನಿಯಾದಿನ (ಕಾಂಭೋಜಿ), ಕಾಶೀವಿಶ್ವೇಶ್ವರ (ಕಾಂಭೋಜಿ), ಶ್ರೀಗುರುಗುಹ (ದೇವಕ್ರಿಯಾ), ಅಡಿಗಿ ಸುಖಿಮು (ಮಧ್ಯಮಾವತಿ) ಮತ್ತು ಕಂಜದಾಲಯ (ಕಮಲ ಮನೋಹರಿ) ಕೃತಿಗಳನ್ನು ಆಕೆ ಪ್ರಸ್ತುತ ಪಡಿಸುತ್ತಿದ್ದ ರೀತಿ ಅನುಪಮವಾಗಿತ್ತು.

ತಮಿಳು ಹಾಡುಗಳ ಕಡೆಗೆ ಪಟ್ಟಮ್ಮಾಳರಿಗೆ ಹೆಚ್ಚು ಒಲವಿತ್ತು. ಶಂಕರಾಭರಣ ರಾಗದ 'ಅನ್ನೈ ಜಾನಕಿ ವಂದಾಳೆ' ಪಾಪನಾಶಂ ಶಿವನ್ ಅವರ ಕೃತಿಯನ್ನು ಹೆಚ್ಚು ಜನಪ್ರಿಯಗೊಳಿಸಿದರು. ತಿರುಚಿರಾಪಳ್ಳಿಯ ಒಂದು ಗೋಷ್ಠಿಯಲ್ಲಿ ವಿಶೇಷವಾಗಿ 'ತಿರುಪ್ಪುಗಾಜ' ಕೃತಿ ಹಾಡಲ್ಪಟ್ಟಿತು. ಇದನ್ನು ಹಲವು ರಾಗಗಳಲ್ಲಿ ಹಾಡಬಹುದಾಗಿದೆ. ಸುಬ್ರಹ್ಮಣ್ಯ ಭಾರತಿಯವರ ಹಲವಾರು ದೇಶ ಭಕ್ತಿ ಗೀತೆಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ಪಟ್ಟಮ್ಮಾಳರದು. 'ಅದುವೊಮೆ ಪಲ್ಲು ಪಡುವೊಮೆ', 'ವೆಟ್ರಿವಿಟ್ಟು ದಿಕ್ಕುಂ', ಶಾಂತಿ ನಿಲವ ವೇಂಡುಂ' ಮತ್ತು 'ಪೂಕುಯಿಲ್ ಪೂವಂ' ಇವು ಆ ಹಾಡುಗಳಾಗಿದ್ದವು.

## ಸಾಂಪ್ರದಾಯಿಕ ಶೈಲಿ:

ಪಟ್ಟಮ್ಮಾಳರು ಕರ್ನಾಟಕ ಸಂಗೀತದ ಸಾಂಪ್ರದಾಯಿಕ ಶೈಲಿಯನ್ನು ಅದರ ಅಗಾಧ ಪ್ರಜ್ಞೆಯ ಹಿನ್ನೆಲೆಯಲ್ಲಿ ಪ್ರತಿನಿಧಿಸಿದರು. ಭಾವ ಹಾಗೂ ಜ್ಞಾನವನ್ನು ಸಮ ಪ್ರಮಾಣದಲ್ಲಿ ಬೆರೆಸಿ ಹಾಡುವ ರೀತಿ ತಿಳಿದಿದ್ದರು. ತಮ್ಮ ಮಾನಸಿಕ ಗುರು ನೈನಾ ಪಿಳ್ಳೈಯವರ ಸಂಪ್ರದಾಯಕ್ಕೆ ಪಟ್ಟಮ್ಮಾಳ್ ಉತ್ತರಾಧಿಕಾರಿಯಾದರು. ಅವರಿಗೆ ಶೃತಿ ಹಾಗೂ ರಾಗಗಳ ಪರಿಜ್ಞಾನ ಹಾಗೂ ಲಯದ ಕ್ಲಿಷ್ಟತೆಯ ಅರಿವಿದ್ದು, ಅವುಗಳ ಬಳಕೆಯಲ್ಲಿ ಪ್ರಭುತ್ವ ಸಾಧಿಸಿದ್ದರು. ಪಲ್ಲವಿಯ ಹಾಡುವಿಕೆಯ ಸಂದರ್ಭದಲ್ಲಿ ಎದುರಾದ ಸವಾಲುಗಳನ್ನು ಎದುರಿಸಿ ಅದನ್ನು ನಿವಾರಿಸಿಕೊಂಡರು. ಪಲ್ಲವಿ ಹಾಡುವಿಕೆ ಅವರ ವೈಶಿಷ್ಟ್ಯವಾಯಿತು. ತಿಸ್ರ ನಡೆ, ಖಂಡ ಹಾಗೂ ಮಿಶ್ರ ತಾಳಗಳನ್ನು ಚತುಶ್ರ ತಾಳಗಳಲ್ಲಿ ಅಳವಡಿಸುವ ಕಲೆ ಅವರಿಗೆ ಸಿದ್ಧಿಸಿತು. ಪಟ್ಟಮ್ಮಾಳ್ ತಾವು ಲಯ ಜ್ಞಾನವನ್ನು ಸಹಜವಾಗಿ ಕಲಿತಂತೆ ಹೇಳುತ್ತಾರೆ. ಅದನ್ನು ಕಲಿಸಲು ಸಾಧ್ಯವಿಲ್ಲ. ಕಲಿಸುವಿಕೆಯಿಂದ ಲಯ ಜ್ಞಾನ ಉಂಟಾಗುವುದಿಲ್ಲ. ಸ್ವತಃ ಆ ಜ್ಞಾನ ವೃದ್ಧಿಗೆ ಶ್ರಮಿಸಬೇಕು. ತಾಳದ ನಡೆ ಯಾವ ಕಾರಣಕ್ಕೂ ವಿಚಲಿತವಾಗಬಾರದು. ಅದಕ್ಕೆ ಪ್ರಖರ ಏಕಾಗ್ರತೆ ಅಗತ್ಯ ಎಂದು ಅವರು ಹೇಳುತ್ತಿದ್ದರು. ಒಂಭತ್ತು ತಾಳಗಳ ಸಂಕೀರ್ಣವನ್ನು ಪಟ್ಟಮ್ಮಾಳ್ ಬಹು ಸುಲಭವಾಗಿ ಹಾಡುತ್ತಿದ್ದರು. ಪಲ್ಲವಿಯ ಮೊದಲ ಸಾಲನ್ನು ಎರಡು ಭಾಗಗಳಾಗಿ ವಿಭಾಗಿಸಿ ನಿಯಮಿತ ಸಮಯಾವಕಾಶದಲ್ಲಿ ಹಾಡುವ ಪ್ರೌಢಿಮೆ ಬೆಳೆಸಿಕೊಂಡರು.

ಪಟ್ಟಮ್ಮಾಳರ ಲಯ ಪ್ರಜ್ಞೆ ಅವರ ಸಂಗೀತದ ಹೆಗ್ಗುರುತಾಗಿತ್ತು. ಭಾವವು ಭಾವನೆಗಳಿಗೆ ಸಂಬಂಧಿಸಿದ್ದರೆ ಲಯವು ಸಂಗೀತ ಜ್ಞಾನಕ್ಕೆ ಸಂಬಂಧಿಸಿದ್ದಾಗಿತ್ತು. ಅವರ ಲಯದ ಬಗೆಗಿನ ಆಸಕ್ತಿಯೂ ಸಹ ನೈನಾ ಪಿಳ್ಳೈ ಅವರ ಪ್ರಭಾವದಿಂದ ಉಂಟಾದದ್ದೇ. 'ತಿರುಪ್ಪು ಗಜ಼' ಹಾಡುಗಳು ಸಂಕೀರ್ಣ ಲಯ ವಿನ್ಯಾಸಗಳನ್ನು ಶೋಧಿಸಲು ಹಾಗೂ ಹಾಡಿ ಆನಂದಿಸಲು ಅಸಂಖ್ಯ ಅವಕಾಶಗಳನ್ನು ಒದಗಿಸಿದವು. ಪಲ್ಲವಿ ಹಾಡುವಿಕೆ ಪಟ್ಟಮ್ಮಾಳರಿಗೆ ಸಂಗೀತ ಪ್ರಿಯರ ಹಾಗೂ ಅಂದಿನ ಸಂಗೀತಜ್ಞರ, ವಿದ್ವಾಂಸರ ಮೆಚ್ಚುಗೆಯನ್ನು ಸಂಪಾದಿಸಿ ಕೊಟ್ಟಿತು. ಅವರ ಈ ಸಾಧನೆ ನಂಬಲಸಾಧ್ಯವಾದ ಸಂಗತಿಯಾಗಿತ್ತು. ತಂಜಾವೂರು ಪ್ರಾಂತ್ಯವು ಪಲ್ಲವಿ ತಜ್ಞರ ತವರೂರಾಗಿತ್ತು. ಯಾವಾಗ ಪಟ್ಟಮ್ಮಾಳ್ ಅಲ್ಲಿ ಸಂಗೀತ ಗೋಷ್ಠಿ ನಡೆಸಿಕೊಟ್ಟರೂ ಅಲ್ಲಿನ ಪಲ್ಲವಿ ಪ್ರವೀಣರು ಆಕೆಯ ಹಾಡುಗಾರಿಕೆ ಸಖೇದಾಶ್ಚರ್ಯ ವ್ಯಕ್ತಪಡಿಸುತ್ತಿದ್ದರು. ಪುರುಷರಿಗೆ ಮೀಸಲಾದ ಆ ಪ್ರಕಾರದಲ್ಲಿ ಪಟ್ಟಮ್ಮಾಳ್ ಸಾಧನೆ ಎಲ್ಲರೂ ವಿಸ್ಮಿತರಾಗುವಂತೆ ಮಾಡುತ್ತಿತ್ತು.

ಪಟ್ಟಮ್ಮಾಳರು ಸಂಗೀತ ಪರಂಪರೆಗಳಿಗೆ ಬಲವಾಗಿ ಅಂಟಿಕೊಂಡಿದ್ದರು. ಅವುಗಳಿಂದ ಹೊರತಾದ ಸಂಗೀತ ಕೇಳಿದರೆ ಅಸಮಾಧಾನ ಹೊಂದುತ್ತಿದ್ದರು. ನೈನಾ ಪಿಳ್ಳೈ ಅವರ ಉದಾಹರಣೆ ನೀಡಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ರಸಿಕರ ಗಮನ ಸೆಳೆಯಲು ಸಂಗೀತಗಾರರು ಬೇರೆ ಹಾದಿ ಹಿಡಿದರೆ ಅದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಸೃಜನಶೀಲ ಪ್ರಯೋಗಗಳನ್ನು ಮಾಡಿ ಪ್ರತಿಭೆ ತೋರ್ಪಡಿಸುವುದನ್ನು ಸಮರ್ಥಿಸುತ್ತಿದ್ದರು. ಅವರು ಎಂದೂ ವಿಭಿನ್ನ ಶೈಲಿಗಳನ್ನು ಬೆರೆಸಲು ಯತ್ನಿಸಲಿಲ್ಲ. ಅದರ ಬದಲಿಗೆ ವಿಭಿನ್ನ ಪ್ರಯೋಗಗಳನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಸ್ವತಃ ನಡೆಸಿ ಯಶಸ್ವಿಯಾದರು. ಮುತ್ತುಸ್ವಾಮಿ ದೀಕ್ಷಿತರ ಹಲವು ಗೂಢ ಕೃತಿಗಳನ್ನು ಪಟ್ಟಮ್ಮಾಳ್ ಜನಪ್ರಿಯಗೊಳಿಸಿದರು. ಅವರ ಸಂಗೀತ ಗೋಷ್ಠಿಯ ಮೊದಲ ಅರ್ಧ ಸಮಯ ತಮಿಳು ಹಾಡುಗಳನ್ನು ಹಾಡುತ್ತಿದ್ದರು. ಸುಬ್ರಹ್ಮಣ್ಯ ಭಾರತಿಯಾರರ ದೇಶಭಕ್ತಿ ಗೀತೆಗಳನ್ನು ಮೊದಲ ಬಾರಿಗೆ ರಾಗ ಸಂಯೋಜಿಸಿ ಸಾರ್ವಜನಿಕವಾಗಿ ಹಾಡಿ ಜನಪ್ರಿಯಗೊಳಿಸಿದವರು ಪಟ್ಟಮ್ಮಾಳ್ ಅವರು.

## ಸಂಗೀತ ದೈತ್ಯರೊಡನೆ ಸ್ಪರ್ಧೆ:

ಪಟ್ಟಮ್ಮಾಳರು ಸಂಗೀತ ವೃತ್ತಿ ಪ್ರಾರಂಭಿಸಿದಾಗ ಹಲವಾರು ದೈತ್ಯ ಪ್ರತಿಭೆಗಳು ಸಾಧನೆಯ ತುತ್ತ ತುದಿಯಲ್ಲಿದ್ದರು. ಅರಿಯಕುಡಿ ಅವರು ಬಹುದೊಡ್ಡ ವಿದ್ವಾಂಸರಾಗಿ ಹೆಸರು ಮಾಡಿದ್ದರು. ಮಹರಾಜ ವಿಶ್ವನಾಥ ಐಯ್ಯರು ತಮ್ಮದೇ ಅಲೆಯನ್ನು ಸೃಷ್ಟಿಸಿದ್ದರು. ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಜಿ.ಎನ್. ಬಾಲಸುಬ್ರಹ್ಮಣಿಯನ್ ಮತ್ತು ಮಧುರೈ ಮಣಿ ಮುಂತಾದವರು ತಮ್ಮ ಹೆಜ್ಜೆ ಗುರುತುಗಳನ್ನು ಆಗಲೇ ಮೂಡಿಸಿದ್ದರು. ಪಟ್ಟಮ್ಮಾಳರ ಸಂಗೀತವನ್ನು ಅಂತಹ ಉನ್ನತ ಪ್ರತಿಭಾಶಾಲಿಗಳೊಂದಿಗೆ ಹೋಲಿಸಲಾಗುತ್ತಿತ್ತು. ಪಟ್ಟಮ್ಮಾಳ್ ಈ ಸ್ಪರ್ಧೆಯಲ್ಲಿ ಯಶಸ್ಸು ಪಡೆಯುವುದೇ ಅಲ್ಲದೆ ತಮ್ಮ ಎದುರಾಳಿಗಳಿಂದ ಶಹಭಾಸ್‌ಗಿರಿ ಪಡೆಯುತ್ತಿದ್ದರು. ಪಾಲ್‌ಘಾಟ್ ಮಣಿ ಅಯ್ಯರ್ ಅವರು ತಮ್ಮ ಕಚೇರಿಗಳಿಗೆ ಮೃದಂಗ ಬಾರಿಸಲು ಒಪ್ಪಿದ್ದು ಅವರ ವಿದ್ವತ್ತಿಗೆ ಸಾಕ್ಷಿ. ಆತ ಮೊದಲಿಗೆ ಮಹಿಳೆಯರ ಕಚೇರಿಗಳಲ್ಲಿ ಸಾಥ್ ನೀಡುತ್ತಿರಲಿಲ್ಲ. 1975ರಲ್ಲಿ ಮುಂಬೈಯಲ್ಲಿ ನಡೆದ ರಸಿಕ ರಂಜಿನಿ ಸಭಾದ ಗಾನ ಗೋಷ್ಠಿಯಲ್ಲಿ ಮಣಿ ಅಯ್ಯರ್ ಮೃದಂಗ ಬಾರಿಸಿ ಪಟ್ಟಮ್ಮಾಳರಿಗೆ ಪಕ್ಕವಾದ್ಯ ಸಹಕಾರ ನೀಡಿದರು.

## ಬದಲಾದ ಶೈಲಿ:

ಪಟ್ಟಮ್ಮಾಳರು ಐವತ್ತರ ವಯಸ್ಸಿನಲ್ಲಿ ತಮ್ಮ ಶೈಲಿಯಲ್ಲಿ ಮಹತ್ವದ ಬದಲಾವಣೆ ಮಾಡಿಕೊಂಡರು. ಅಲ್ಲಿಯವರೆಗೂ ಆಕೆ ಲಯಕ್ಕೆ ಪ್ರಾಮುಖ್ಯತೆ ನೀಡುತ್ತಿದ್ದರು. ಸಂಕೀರ್ಣ ತಾಳಗಳ ಆವರ್ತನವನ್ನು ಸುಲಭವಾಗಿ ಮಾಡುವ ಶೈಲಿ ಅವರದ್ದಾಗಿತ್ತು. ಈಗ ಅವರಿಗೆ 'ಭಾವ' ಮುಖ್ಯವಾಗಿ ತೋರಿತು. ಸಂಗೀತದ ಮೂಲಕ ಭಕ್ತಿ ಪ್ರಕಟಿಸಲು ಆರಂಭಿಸಿದರು. ಅವರು ಹಾಡಿದ 'ಎಂತರಿಕು ವರುಮೊ ಶಿವ ಕೃಪೈ' ಎಂಬ ಹಾಡಿನಲ್ಲಿ ಶಿವನ ಕುರಿತ ಭಕ್ತಿ ಭಾವ ಅನಾವರಣಗೊಂಡಿತು.

ಪಟ್ಟಮ್ಮಾಳ್ ತಮ್ಮ ವೃತ್ತಿ ಜೀವನದಲ್ಲಿ ಅಸಂಖ್ಯ ಗಾಯನ ಗೋಷ್ಠಿಗಳನ್ನು ನಡೆಸಿ ಕೊಟ್ಟಿದ್ದಾರೆ. ಅವರ ಮದುವೆಯ ಮೊದಲ ವರ್ಷದ ಹೊರತು ಇನ್ನಾವ ಸಮಯದಲ್ಲೂ ಗಾನಗೋಷ್ಠಿ ಇಲ್ಲದ ಕಾಲವಿರಲಿಲ್ಲ. ಪ್ರತಿ ತಿಂಗಳೂ ಸಂಗೀತ ಕಚೇರಿಗಳು ಇರುತ್ತಿದ್ದವು. ಹಬ್ಬದ ಸಮಯದಲ್ಲಿ ತಿಂಗಳಿಗೆ ಸರಾಸರಿ

ಇಪ್ಪತ್ತು ಕಚೇರಿಗಳು ಖಾಯಂ ಆಗಿರುತ್ತಿದ್ದವು. ಒಂದೇ ತಿಂಗಳಲ್ಲಿ ಇಪ್ಪತ್ತೇಳು ಗಾಯನ ಕಾರ್ಯಕ್ರಮಗಳನ್ನು ನೀಡಿ ಪಟ್ಟಮ್ಮಾಳ್ ದಾಖಲೆ ನಿರ್ಮಿಸಿದ್ದಾರೆ. ಈ ಗೋಷ್ಠಿಗಳು ಸಾಮಾನ್ಯವಾಗಿ ನಾಲ್ಕು ಗಂಟೆಗಳ ಅವಧಿಯದ್ದಾಗಿರುತ್ತಿದ್ದವು.

ಅವರ ಕಂಠವು ವೀಣೆಯ ನಾದದೊಂದಿಗೆ ಸುಲಲಿತವಾಗಿ ಹೊಂದಿಕೊಳ್ಳುವಂತಿತ್ತು. ಅವರ ಹಾಡುವಿಕೆ 'ಸಂಗತಿ'ಗಳನ್ನು ಒಳಗೊಂಡು ನಿಧಾನಗತಿಯಲ್ಲಿ ಇರುತ್ತಿದ್ದವು. ಅವರ ಸ್ಪಷ್ಟ ಉಚ್ಚಾರಣೆ ಹಾಗೂ ಹಾಡಿನ ಅರ್ಥ ತಿಳಿದು ಹಾಡುವಿಕೆಗಳಿಂದ ಭಾವದ ಸರಿಯಾದ ಅನುಭೂತಿ ಉಂಟಾಗುತ್ತಿತ್ತು. ಗಮಕದ ಮೇಲೆ ಆಕೆಗಿದ್ದ ಹಿಡಿತ ಅತ್ಯುತ್ತಮವಾಗಿತ್ತು. ಹಾಡಿಕೆಯ ಮೂಲಕ ರಚನೆಕಾರರ ಭಾವಗಳನ್ನು ಶ್ರೋತೃಗಳಿಗೆ ಅರ್ಥ ಮಾಡಿಸಲು ಯತ್ನಿಸುತ್ತಿದ್ದರು. ಶ್ರಮವಹಿಸಿ ರಚನಕಾರರ ಪರಿಸರ ಹಾಗೂ ಆ ಹಾಡನ್ನು ಬರೆದ ಸಂದರ್ಭವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದಕ್ಕೆ ನಿರ್ದಶನವಾಗಿ ಪಾಪನಾಶಂ ಶಿವನ್ ಅವರ ಮಾತುಗಳನ್ನು ಉಲ್ಲೇಖಿಸುವುದು ಸೂಕ್ತ. "Pattammal is the only artist to present my compositions in a manner synchronizing with my Manodharma" (ನನ್ನ ರಚನೆಗಳಲ್ಲಿನ ನನ್ನ ಮನೋಧರ್ಮವನ್ನು ಅರಿತು ಹಾಡುವ ಏಕೈಕ ಕಲಾವಿದೆ ಎಂದರೆ ಅದು ಪಟ್ಟಮ್ಮಾಳ್) ಇದನ್ನು **'ಪಟ್ಟಮ್ಮಾಳ್ ಶೈಲಿ'** ಎಂದೇ ಹೇಳಲಾಗುತ್ತಿತ್ತು. ಅವರು ಲಕ್ಷಣ, ಲಕ್ಷ್ಯಗಳನ್ನು ಒಂದೆಡೆ ಹಾಗೂ ಭಾವ, ಲಯಗಳನ್ನು ಇನ್ನೊಂದೆಡೆ ಸಮನ್ವಯಗೊಳಿಸ ಬಲ್ಲವರಾಗಿದ್ದರು. ಶ್ರೋತೃಗಳ ಮನ ಗೆಲ್ಲಲು ಎಂದೂ ಪಟ್ಟಮ್ಮಾಳರು ಅನವಶ್ಯಕವಾಗಿ ರಾಗ 'ಸಂಚಾರ'ಗಳನ್ನು ಮಾಡುತ್ತಿರಲಿಲ್ಲ. ಇದು ಶ್ರೋತೃಗಳ ಮನದಲ್ಲಿ ಶಾಂತತೆ ತಂದು ಪಟ್ಟಮ್ಮಾಳರ ಕುರಿತ ಮೆಚ್ಚುಗೆ ಹೆಚ್ಚಾಗುತ್ತಿತ್ತು. ಅವರ ಆಲಾಪನೆಗಳು ಚಿಕ್ಕದಾಗಿರುತ್ತಿದ್ದವು. ತಮ್ಮ ಶಾರೀರಕ್ಕೆ ಹೊಂದುವಂತಹ ರಾಗಗಳನ್ನೇ ಆರಿಸಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ತಮ್ಮ ಸ್ವರವನ್ನು ಆಕೆ ದುಡಿಸಿಕೊಳ್ಳುತ್ತಿದ್ದರು.

ಶ್ರೋತೃಗಳ ಹೃದಯ ಹಾಗೂ ಮನಸ್ಸನ್ನು ತಮ್ಮ ಸಂಗೀತದಿಂದ ತಣಿಸಲು ಪಟ್ಟಮ್ಮಾಳ್ ಸಮರ್ಥರಾಗಿದ್ದರು. ಅವರ ಸಂಗೀತವು ಎಚ್ಚರದಿಂದ ಆಲಿಸುವಂತೆ ಇರುತ್ತಿತ್ತು. ಶ್ರೋತೃಗಳೂ ಸಂಗೀತದಲ್ಲಿ ಭಾಗಿಗಳಾಗಬೇಕಿತ್ತು. ಭಾಷಾ ಶುದ್ಧತೆಗೆ ಪಟ್ಟಮ್ಮಾಳ್ ಅವರು ಅತೀವ ಗಮನ ನೀಡುತ್ತಿದ್ದ ಕಾರಣ

ಶ್ರೋತೃಗಳಿಗೂ ಅದರ ಪರಿಜ್ಞಾನ ಇರಬೇಕಿತ್ತು. ಜನಪ್ರಿಯತೆಯ ಬಗ್ಗೆ ಅವರಿಗೆ ಗಮನವಿರಲಿಲ್ಲ. ಅವರೇ ಹೇಳುವಂತೆ **"It is enough if I get a hundred sincere, discerning listeners. I will not lower my standards to reach out to the thousands or more"** (ನನಗೆ ನೂರು ಜನ ಪ್ರಾಮಾಣಿಕ ಕೇಳುಗರು ಸಿಕ್ಕರೂ ಸಾಕು, ಆಗಲೂ ನಾನು ಸಾವಿರಾರು ಜನರಿರುವಾಗ ಹಾಡುವ ಗುಣಮಟ್ಟವನ್ನೇ ಕಾಪಾಡಿಕೊಳ್ಳುತ್ತೇನೆ.) ಶೃತಿ, ಲಯಗಳಷ್ಟೇ ಅಲ್ಲದೆ ಹಾಡುವಾಗಿನ ಭಾವ ಭಂಗಿಗಳನ್ನು ಶ್ರೋತೃಗಳು ಗಮನಿಸಬೇಕಾಗಿತ್ತು. ಕಂಚಿ ರೇಷ್ಮೆ ಸೀರೆ ಉಟ್ಟು, ವಜ್ರದ ಓಲೆ, ಮೂಗುತಿಗಳನ್ನು ಧರಿಸಿ ಆಂಗಿಕ ಅಭಿನಯದೊಡನೆ ಪಟ್ಟಮ್ಮಾಳ್ ಹಾಡುತ್ತಿದ್ದರು. ವೇದಿಕೆಯಲ್ಲಿ ದೃಢ ವಿಶ್ವಾಸದಿಂದ, ಧೈರ್ಯವಾಗಿ ಗಾಯನ ಪ್ರಸ್ತುತಪಡಿಸುತ್ತಿದ್ದರು. ಅವರ ಸಮಕಾಲೀನರಾದ ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಲ್. ವಸಂತಕುಮಾರಿ ಹಾಗೂ ಪಟ್ಟಮ್ಮಾಳರನ್ನು ಕರ್ನಾಟಕ ಸಂಗೀತದ ಮಹಿಳಾ ತ್ರಿಮೂರ್ತಿಗಳೆಂದು ಪರಿಗಣಿಸಲಾಗಿತ್ತು.

ಅತಿಜಾಗರೂಕತೆಯಿಂದ ಗಮನವಿಟ್ಟು ತಮ್ಮ ಕಚೇರಿಗಳಿಗೆ ಪಟ್ಟಮ್ಮಾಳರು ಸಿದ್ಧವಾಗುತ್ತಿದ್ದರು. ಯಾವುದೇ ಹಾಡನ್ನು ಹಾಡುವ ಮೊದಲು ಅದರ ಭಾವ, ಅರ್ಥ, ಉಚ್ಚಾರಣೆ, ಇತ್ಯಾದಿಗಳಿಗೆ ಗಮನ ನೀಡಿ ತಯಾರಿ ಮಾಡಿಕೊಳ್ಳುತ್ತಿದ್ದರು. ಅವರ ಈ ಪ್ರಾಮಾಣಿಕ ಪ್ರಯತ್ನ, ಸೂಕ್ಷ್ಮ ವಿವರಗಳಿಂದಾಗಿ ಅವರಿಗೆ ಶ್ರೋತೃಗಳ ಅಪಾರ ಮೆಚ್ಚುಗೆ ದೊರೆಯುತ್ತಿತ್ತು. ಪಂಡಿತ ಪಾಮರರಿಬ್ಬರನ್ನು ಏಕಕಾಲಕ್ಕೆ ಮೆಚ್ಚಿಸಬಲ್ಲ ಸಂಗೀತ ಪಟ್ಟಮ್ಮಾಳರದ್ದು. ರಾಗ ಮತ್ತು ಆಲಾಪನೆಗಳನ್ನು ಆಯ್ದುಕೊಳ್ಳುವಲ್ಲಿ ಪಟ್ಟಮ್ಮಾಳರು ಹಲವು ನಿರ್ಬಂಧಗಳಿಗೆ ಬದ್ಧರಾಗಿದ್ದರು. ಅವರು ಕಚೇರಿಗಳಿಗೆ ಸಿದ್ಧವಾಗುತ್ತಿದ್ದ ರೀತಿಯೂ ಪರಿಶುದ್ಧವಾಗಿತ್ತು. ಸಂದರ್ಭಕ್ಕೆ ತಕ್ಕಂತಹ ರಾಗ, ಆಲಾಪನೆ ಹಾಗೂ ರಚನೆಗಳನ್ನು ಆರಿಸಿಕೊಳ್ಳುತ್ತಿದ್ದರು. ಸರಿಯಾದ ತಾಳಗತಿಯನ್ನು, ಸಾಮಾನ್ಯವಾಗಿ ನಿಧಾನ ಹಾಗೂ ಮಧ್ಯಮ ಗತಿಯನ್ನು ಸರಿಯಾದ ಸ್ಥಳಗಳಲ್ಲಿ ಬಳಸಿ ಹಾಡುತ್ತಿದ್ದರು.

ಪಟ್ಟಮ್ಮಾಳರ ಕೊನೆಯ ತಮ್ಮ ಡಿ.ಕೆ. ಜಯರಾಮನ್ ಅವರೂ ಪಟ್ಟಮ್ಮಾಳರ ವೃತ್ತಿ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. ಅವರನ್ನು ಪಟ್ಟಮ್ಮಾಳ್ ಶಿಷ್ಯನಾಗಿ ತಯಾರು ಮಾಡಿದ್ದರು. ಆತನಿಗೆ 1990ರಲ್ಲಿ 'ಸಂಗೀತ

**ಕಲಾನಿಧಿ'** ಪ್ರಶಸ್ತಿ ಲಭಿಸಿದೆ. ಹಲವಾರು ಕಚೇರಿಗಳಲ್ಲಿ ಅಕ್ಕನ ಜೊತೆ ಹಾಡಿದ್ದಾರೆ. ಆತ ಸೂಕ್ಷ್ಮಗ್ರಾಹಿ. ಬಹು ಬೇಗ ಕಲಿಯಬಲ್ಲ ವಿದ್ಯಾರ್ಥಿ. ಪಟ್ಟಮ್ಮಾಳರು ಆತನ ಜೊತೆ ಹಾಡುವಾಗ ತಮ್ಮ ಉಚ್ಚ ಸ್ವರವನ್ನು ತಗ್ಗಿಸಿಕೊಳ್ಳಬೇಕಾಗಿತ್ತು, ಆತ ಸ್ವರವನ್ನು ಏರಿಸಿಕೊಳ್ಳಬೇಕಿತ್ತು. ಇದು ಆತನಿಗೆ ಸಾಕಷ್ಟು ಶ್ರಮವನ್ನು ಉಂಟು ಮಾಡುತ್ತಿತ್ತು.

## ಹೃದಯ ಗೆದ್ದ ಗಾನ ಗೋಷ್ಠಿಗಳು:

ಪಟ್ಟಮ್ಮಾಳರು ಭಾರತದಾದ್ಯಂತ ಹಾಗೂ ವಿದೇಶಗಳಲ್ಲಿ ಅಸಂಖ್ಯ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವು ಸಂದರ್ಭಗಳು ವೈಭವೋಪೇತವಾದವು. ಉದಾಹರಣೆಗೆ ಫ್ರಾನ್ಸ್‌ನಲ್ಲಿ ನಡೆದ **'ಭಾರತ ಹಬ್ಬ'** ಪಟ್ಟಮ್ಮಾಳರು ಸ್ವತಃ ಹೃದಯ ತುಂಬಿಕೊಂಡ ಗೋಷ್ಠಿಗಳೆಂದರೆ ಖ್ಯಾತ ಸಂಗೀತಗಾರರು ಶ್ರೋತೃಗಳಾಗಿದ್ದಾಗ. ಪಾಪನಾಶಂ ಶಿವನ್, ಚೆಂಬೈ ವೈದ್ಯನಾಥ ಭಾಗವತರ್ ಮತ್ತು ಸ್ವಾಮಿನಾಥ ಪಿಳ್ಳೈ ಅವರ 60ನೇ ಹುಟ್ಟು ಹಬ್ಬದಂದು ಹಾಡಿದ ದಿನವನ್ನು ಯಾವಾಗಲೂ ನೆನೆಸಿಕೊಳ್ಳುತ್ತಾರೆ. ಇನ್ನೊಂದು ಸಂದರ್ಭದಲ್ಲಿ ಟಿ. ಬೃಂದಾ ಅವರ ನಿವಾಸದಲ್ಲಿ, ಬೃಂದಾ ಅವರ ಸೋದರಿ ಮುಕ್ತಾ, ಸ್ವಾಮಿನಾಥ ಪಿಳ್ಳೈ, ಟಿ. ಶಂಕರನ್, ಜಯಮ್ಮ, ಬಾಲಸರಸ್ವತಿ, ಪೆರಿಯ ಕುಟ್ಟಿಯಮ್ಮ, ಚಿನ್ನಕುಟ್ಟಿಯಮ್ಮ, ಅವರಂತಹ ಸಂಗೀತ ಪ್ರತಿಭೆಗಳ ಎದುರಲ್ಲಿ ಗಾನಸುಧೆ ಹರಿಸಿ ಅವರಿಂದ ಶ್ಲಾಘಿತರಾದ ಪಟ್ಟಮ್ಮಾಳ್ ಅಂದು ಹಾಡಿದ **'ರಾಮ ಪ್ರಾಣ ಸಖಿ'** (ಪದ–ಭೈರವಿ) ಎಂಬ ಹಾಡಿಗೆ ಎಲ್ಲರ ಮೆಚ್ಚುಗೆ ಗಳಿಸಿದರು.

ಮದರಾಸಿನ ಶಾಸ್ತ್ರಿ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕೆಲವು ಕೃತಿಗಳನ್ನು ಹಾಡಲು ಪಟ್ಟಮ್ಮಾಳರನ್ನು ಆಹ್ವಾನಿಸಲಾಗಿತ್ತು. ಅಂದು ಡಾ॥ ಎಸ್. ರಾಮನಾಥನ್ ಅವರು ಸಂಪಾದಿಸಿದ 'ತ್ಯಾಗರಾಜ ಪ್ರಹ್ಲಾದ ಭಕ್ತಿ ವಿಜಯಂ' ಎಂಬ ಪುಸ್ತಕದ ಬಿಡುಗಡೆ ಸಮಾರಂಭವಿತ್ತು. ಅರಿಯಕುಡಿಯವರು ವಿಶೇಷ ಆಹ್ವಾನಿತರು. ಪಟ್ಟಮ್ಮಾಳರ 'ಏತಿ ಜನ್ಮಮಿದಿ' (ವರಲಿ) ಕೃತಿಯನ್ನು ಕೇಳಿ ಅರಿಯಕುಡಿ ಆನಂದತುಂದಿಲರಾಗಿ ಪಟ್ಟಮ್ಮಾಳ್ ಹಾಗೂ ಜಯರಾಮನ್‌ರನ್ನು ತಮ್ಮ ಮನೆಗೆ ಹಾಡಲು ಆಹ್ವಾನಿಸಿದರು.

ಪಟ್ಟಮ್ಮಾಳರ ಕಚೇರಿಯಲ್ಲಿ ಜನ ಜಂಗುಳಿ ಅಪಾರವಾಗಿರುತ್ತಿದ್ದು ಅವರ

ಸುರಕ್ಷೆಗೆ ಗಾರ್ಡ್‌ಗಳು ಬೇಕಾಗುತ್ತಿತ್ತು. ಅಂತಹ ಕಚೇರಿಗಳು ಶುಚೀಂದ್ರಂ, ಸೇಲಂ, ತೆನಾಲಿ ಮತ್ತು ಕೊಟ್ಟಾಯಂಗಳಲ್ಲಿ ನಡೆದವು. ತಿರುಕ್ಕಾರ್ ಎಂಬಲ್ಲಿ ಶ್ರೋತೃಗಳು ಅವರ 'ಶ್ರೀರಂಗಪುರ ವಿಹಾರ' ಮತ್ತು ರಾಗಂ–ತಾನಂ–ಪಲ್ಲವಿಯನ್ನು ಮತ್ತೆ ಹಾಡಲು ಒತ್ತಾಯಿಸಿದರು. ಕಾಯಮೋಜಿ ಎಂಬ ಸ್ಥಳದಲ್ಲಿ ರಾತ್ರಿ ಹತ್ತಕ್ಕೆ ಪ್ರಾರಂಭವಾದ ಕಚೇರಿಯ ಮರುದಿನ ಬೆಳಿಗ್ಗೆ 5ರವರೆಗೆ ನಿರಂತರವಾಗಿ ನಡೆಯಿತು.

ಕಲಾಕ್ಷೇತ್ರದಲ್ಲಿ ನಡೆದ ಗಾಯನದಲ್ಲಿ ಪಟ್ಟಮ್ಮಾಳ್ ರಾಮಲಿಂಗ ಅಡಿಗಳ ಒಂದು ಕೃತಿ 'ವಿರುತ್ತುಂ' ಅನ್ನು ಹಾಡಿದರು. ಆ ಸಂತ ಕವಿಯ ದೇವರೊಂದಿಗಿನ ಗಾಢ ಸಂಬಂಧ ಆ ಕೃತಿಯಲ್ಲಿ ಎದ್ದು ತೋರುತ್ತಿತ್ತು. ತಾನು ದೇವರಿಂದ ದೂರವಾಗುವುದು ಯಾವ ಕಾರಣಕ್ಕೂ ಸಾಧ್ಯವಿಲ್ಲವೆಂಬ ಭಾವ ಉಂಟಾಗುತ್ತಿತ್ತು. ಆ ಹಾಡಿನ ಒಂದು ಸಾಲು 'ಕತ್ರ ನೆಂಜಗಮ್ ಕಲ್ಲೈ ಮರುಂಡಲುಂ' ಹಾಡುವಾಗ ಪಟ್ಟಮ್ಮಾಳ್ ಕಣ್ಣು ತುಂಬಿ ಬಂದಿತ್ತು. ಶ್ರೋತೃವಾಗಿದ್ದ ರುಕ್ಮಿಣೀ ದೇವಿ ಅರುಂಡೇಲ್ ಅವರೂ ಸಹ ಕಣ್ಣೀರು ಹರಿಸಿದರು. ಗಾಯಕಿ ಹರಿಸಿದ ಗಾನರಸಧಾರೆ ಅಷ್ಟು ಭಾವಪೂರ್ಣವಾಗಿತ್ತು.

■

# ಕಲಾ ವಿಮರ್ಶೆ

**ಪ**ಟ್ಟಮ್ಮಾಳರ ಸೂಕ್ಷ್ಮಗ್ರಾಹಿ ಶ್ರೋತೃಗಳು ಅವರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಟಿ.ಎಸ್. ಪಾರ್ಥಸಾರಥಿ ಒಬ್ಬ ಪ್ರಸಿದ್ಧ ವಿಮರ್ಶಕರು. ಅವರು ಪಟ್ಟಮ್ಮಾಳರ ಶೈಲಿ ಮತ್ತು ಕೊಡುಗೆಗಳನ್ನು ವಿಮರ್ಶಿಸಿ ನಾಲ್ಕು ಅಂಶಗಳನ್ನು ಗುರುತಿಸಿದರು. ಮೊದಲನೆಯದಾಗಿ ಅವರ ಸಂಪ್ರದಾಯ ಶರಣತೆ ಹಾಗೂ ಯಾವ ಕಾರಣಕ್ಕೂ ಅದರೊಂದಿಗೆ ರಾಜಿ ಮಾಡಿಕೊಳ್ಳದಿದ್ದುದು. ಆಕೆಯ ಸಂಗೀತ ಪ್ರೇಮ ವರ್ಣಿಸಲು ಪಾರ್ಥಸಾರಥಿ **'ತಪಸ್ಯೆ'** ಎಂಬ ಪದ ಬಳಸುತ್ತಾರೆ. ಮೂರನೆಯದಾಗಿ ಪಟ್ಟಮ್ಮಾಳರು ಕಚೇರಿಗಾಗಿ ಆಯ್ದು ಕೊಳ್ಳುವ ಹಾಡುಗಳು. ಅವುಗಳನ್ನು ಆಕೆ ಬಹಳ ಎಚ್ಚರದಿಂದ ಆರಿಸುತ್ತಿದ್ದರು. ತಮ್ಮದೇ ಶೈಲಿಗೆ ಹಾಡುಗಳನ್ನು ಒಗ್ಗಿಸಿಕೊಳ್ಳುವ ಮುನ್ನ ಅದರ ಪ್ರಾಮುಖ್ಯತೆಯನ್ನು ಮೌಲ್ಯಮಾಪನ ಮಾಡುತ್ತಿದ್ದರು. ಕೊನೆಯದಾಗಿ ಮಧ್ಯಮ ಕಾಲದಲ್ಲಿ ಹಾಡುವಿಕೆ. ಇದು ಕರ್ನಾಟಕ ಸಂಗೀತವನ್ನು ಜ್ಞಾಪಿಸಿಕೊಳ್ಳುವಂತೆ ಮಾಡುತ್ತದೆ.

ಜಿ.ಎನ್. ಬಾಲಸುಬ್ರಹ್ಮಣ್ಯಂ ಕರ್ನಾಟಕ ಸಂಗೀತದ ಪ್ರತಿಪಾದಕರು ಹಾಗೂ ಪಟ್ಟಮ್ಮಾಳರ ಸಮಕಾಲೀನರು. ಅವರು ಪಟ್ಟಮ್ಮಾಳರು ಆಯ್ದುಕೊಳ್ಳುವ ಕಷ್ಟಕರವಾದ ತಾಳಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಒಮ್ಮೆ ಆಕೆ ಧ್ರುವ ತಾಳ ಪಲ್ಲವಿಯನ್ನು ಸಂಕೀರ್ಣ ಜತಿ ಹಾಗೂ ಎರಡು ಗತಿಗಳಲ್ಲಿ ಹಾಡಿದಾಗ ಅವರ ಏಕಾಗ್ರತೆಗೆ ಮೆಚ್ಚುಗೆ ವ್ಯಕ್ತಪಡಿಸಿ ಆಕೆಯನ್ನು ಅಭಿನಂದಿಸಿದರು. ಸಂಕೀರ್ಣವಾದ ತಾಳಗಳನ್ನು ನಿಭಾಯಿಸುವ ರೀತಿ ಅವರಿಗೆ ಸಂತಸ ಉಂಟು ಮಾಡಿತ್ತು.

ವಯೊಲಿನ್‌ನಲ್ಲಿ ಪಟ್ಟಮ್ಮಾಳರಿಗೆ ಪಕ್ಕ ವಾದ್ಯ ನುಡಿಸುತ್ತಿದ್ದ ಟಿ. ರುಕ್ಮಿಣಿ ಅವರು ಪಟ್ಟಮ್ಮಾಳರ ತಾಳ, ಲಯಗಳ ಮೇಲಿನ ಹಿಡಿತ, ಸರಿಯಾದ ಪದ ಪ್ರಯೋಗ ಹಾಗೂ ಭಾವಗಳನ್ನು ಮೆಚ್ಚಿಕೊಳ್ಳುತ್ತಾರೆ. ಪಕ್ಕ ವಾದ್ಯಗಾರರಾಗಿ ಆಕೆ

ಪಟ್ಟಮ್ಮಾಳರ ಲಯ ನಿಭಾವಣೆಯನ್ನು ಸ್ವತಃ ಅನುಭವಿಸುತ್ತಾರೆ. ರುಕ್ಮಿಣಿ ತಮ್ಮ ಸಂಗೀತ ಜ್ಞಾನವನ್ನು ಪಟ್ಟಮ್ಮಾಳರಿಗೆ ಸಾಥ್ ಕೊಡುವುದರಿಂದ ವಿಸ್ತರಿಸಿಕೊಳ್ಳುತ್ತಾರೆ.

ಖ್ಯಾತ ವಿದುಷಿ ಎಂ.ಎಲ್. ವಸಂತಕುಮಾರಿ ಪಟ್ಟಮ್ಮಾಳರ ಪಲ್ಲವಿ ಹಾಡುವಿಕೆಯಿಂದ ಪ್ರೀತರಾಗಿ ಪಟ್ಟಮ್ಮಾಳ್ ಮೊದಲ ಬಾರಿಗೆ ಪಲ್ಲವಿ ಹಾಡುವ ಮೂಲಕ ಹಾಕಿದ ಅಡಿಪಾಯದ ಮೇಲೆ ಇತರ ಮಹಿಳಾ ಪಲ್ಲವಿ ತಜ್ಞರು ಬೆಳೆದು ಬಂದರು ಎನ್ನುತ್ತಾರೆ. ಅರಿಯಕುಡಿ ಅವರು ಪಟ್ಟಮ್ಮಾಳರ ಶೈಲಿಯನ್ನು ಹೊಗಳುತ್ತಾರೆ. ಅವರ ಸಂಪ್ರದಾಯ ಬದ್ಧತೆಯನ್ನು ಮೆಚ್ಚುತ್ತಾರೆ. ಅವರು ಪಟ್ಟಮ್ಮಾಳ್ ಸಂಗಿತ ಸಾಧನೆಗಾಗಿ ಏನೆಲ್ಲ ಸಾಧ್ಯವೋ ಎಲ್ಲವನ್ನೂ ಮಾಡಿದ್ದಾರೆ ಎನ್ನುತ್ತಾರೆ.

ಎನ್. ರಾಜಗೋಪಾಲನ್ ಅವರು ಸಂಗೀತ ವಿಮರ್ಶಕರು. ಅವರು ಹೇಳುವಂತೆ ಪಟ್ಟಮ್ಮಾಳರು ವಿಭಿನ್ನ ಸಂಗೀತ ಪರಿಣತಿಯನ್ನು ಪಡೆದಿದ್ದಾರೆ. ಆಕೆ ಪ್ರತಿ ಕಚೇರಿಯನ್ನೂ ಮನತುಂಬಿ ಹಾಡುತ್ತಾರೆ. ಅವರ ಗಾನ ಗೋಷ್ಠಿಗಳು ಶಾಂತಿ, ಸಂತೋಷ ಹಾಗೂ ಶಿವನನ್ನು (Godliness) ನೀಡುತ್ತವೆ. ಅವರ ಸಾಧನೆಗಳು ಅಪೂರ್ವ. ರಾಜಗೋಪಾಲನ್ ಪಟ್ಟಮ್ಮಾಳರ ತಾಳಗತಿಯ ಹಿಡಿತವನ್ನು ಸಾಹಿತ್ಯದೆಡೆಗಿನ ಕಾಳಜಿಯನ್ನು ಗುರುತಿಸುತ್ತಾರೆ.

ಕೊಯಮತ್ತೂರಿನ ಡಿ. ವರದರಾಜನ್ ಹೇಳುವಂತೆ **'ಪಟ್ಟಮ್ಮಾಳರ ಶೈಲಿಯು'** ಮಾಧುರ್ಯ, ಸರಿಯಾದ ಪದ ಪ್ರಯೋಗ, ನಿಖರವಾದ ಸಮಯ ಪಾಲನೆ ಮತ್ತು ರಚನಕಾರರ ನಿಜವಾದ ಭಾವನೆಗಳನ್ನು ಹಾಡಿನ ಮೂಲಕ ಬೆಳಕಿಗೆ ತರುವ ರೀತಿ ಎಲ್ಲವನ್ನೂ ಒಳಗೊಂಡಿದೆ.

■

# ಸಂಗೀತ–ಪಟ್ಟಮ್ಮಾಳರ ದೃಷ್ಟಿಯಲ್ಲಿ

**ಪ**ಟ್ಟಮ್ಮಾಳರ ಸಂಗೀತ ವಿದೇಶೀ ಗಣ್ಯರ ಮೇಲೂ ಗಾಢವಾದ ಪರಿಣಾಮ ಬೀರಿದೆ. ಮೌಂಟ್‌ಬ್ಯಾಟನ್ನರ ಪತ್ನಿ ಅವರ ಸಂಗೀತ ಕೇಳಿ "You really make a melody, pleasing to ears, creating an environment of sublimity" ಎಂದು ಶ್ಲಾಘಿಸಿದರು. ಪಿಟ್ಸ್‌ಬರ್ಗ್‌ನ ಅಮೇರಿಕಾದ ಶ್ರೋತೃಗಳು "She sings good music, pleasing to the ears" (ಆಕೆ ಒಳ್ಳೆಯ ಕಿವಿಗಳಿಗೆ ಹಿತವಾದ ಸಂಗೀತ ಹಾಡುತ್ತಾರೆ) ಎನ್ನುತ್ತಾರೆ. ಶ್ರೀಜಾನ್ ಪಾಲ್ ಅಮೆರಿಕಾದ ಕಲಾವಿದ ಇವರ ಹಾಡು ಕೇಳಿ "If she had been born in our country we would have considered her to be the best" (ಈಕೆ ನಮ್ಮ ದೇಶದಲ್ಲಿ ಹುಟ್ಟಿದ್ದರೆ ನಮ್ಮೆಲ್ಲರಿಗಿಂತ ಅತ್ಯುತ್ತಮ ಎಂದು ಪರಿಗಣಿಸುತ್ತಿದ್ದೆವು) ಎಂದು ಅಭಿನಂದಿಸುತ್ತಾರೆ.

ಸಮಕಾಲೀನ ಕರ್ನಾಟಕ ಸಂಗೀತದ ಕುರಿತ ಪರಿಜ್ಞಾನ ಪಟ್ಟಮ್ಮಾಳರಿಗಿತ್ತು. ಅದರ ಆಕರ್ಷಣೆ ನಿರಂತರವಾದದ್ದು. ಕಾಲಾನುಕಾಲಕ್ಕೆ ಕರ್ನಾಟಕ ಸಂಗೀತದ ಗುಣಮಟ್ಟ ಕಡಿಮೆಯಾದರೆ ಅದಕ್ಕೆ ಸಂಗೀತಗಾರರೇ ಹೊಣೆ ಎಂದು ನಂಬುತ್ತಾರೆ. ಸಂಗೀತಗಾರರು ಜನರನ್ನು ಎಚ್ಚರಿಸಿ, ತಿಳಿವಳಿಕೆ ನೀಡಿ, ಗುಣಮಟ್ಟ ಎತ್ತರಿಸುವುದು ಅವಶ್ಯಕ. ಇದಕ್ಕೆ ವಿರುದ್ಧವಾಗಿ ಸಂಗೀತಗಾರರು ಜನರನ್ನು ಆಕರ್ಷಿಸಲು ಅದರ ಸ್ಥಾನಮಾನವನ್ನು ದುಸ್ಥಿತಿಗೆ ತಂದಿರುವುದಕ್ಕೆ ಅವರಲ್ಲಿ ವಿಷಾದವಿದೆ. ಸೃಜನಶೀಲತೆಯ ಹೆಸರಿನಲ್ಲಿ ಸಂಪ್ರದಾಯಕ್ಕೆ ವಿರುದ್ಧವಾಗಿ ಹೋಗುವುದಕ್ಕೆ ಅವರ ವಿರೋಧವಿದೆ. ಸಂಗೀತವನ್ನು ಕಲೆ ಎಂದೇ ಪರಿಗಣಿಸಬೇಕು. ಅದು ಭ್ರಷ್ಟವಾಗಬಾರದು. ಆದರ್ಶಗಳು ಹಾಗೆಯೇ ಅವುಗಳಿಗೆ ಬದ್ಧರಾಗಿರುವುದು ಅಷ್ಟೇ ಮುಖ್ಯವಾಗುತ್ತದೆ.

ಸಂಗೀತಗಾರರು ಪುಸ್ತಕಗಳನ್ನು, ಹಾಡಿನ ಪ್ರತಿಗಳನ್ನು ನೋಡಿಕೊಂಡು ಹಾಡುವುದನ್ನು ಪಟ್ಟಮ್ಮಾಳ್ ತೀವ್ರವಾಗಿ ವಿರೋಧಿಸುತ್ತಿದ್ದರು. ಸಂಗೀತವು

ಹೃದಯದಾಳದಿಂದ ಬರಬೇಕೇ ಹೊರತು ಕಂಠದಿಂದಲ್ಲ ಎಂಬುದು ಅವರ ನಂಬಿಕೆ. ಸಾಹಿತ್ಯವನ್ನು ಮನಸ್ಸಿನಲ್ಲಿ ತುಂಬಿಕೊಂಡು, ಹಾಡುತ್ತಾ ಅಭ್ಯಾಸ ಮಾಡುವುದು ಅವರ ರೂಢಿಯಾಗಿತ್ತು. ಪಟ್ಟಮ್ಮಾಳರು, ಲಘು ಸಂಗೀತ, ಸಿನಿಮಾ ಸಂಗೀತ ಹಾಗೂ ಕರ್ನಾಟಕ ಸಂಗೀತಗಳ ನಡುವಿನ ಸೂಕ್ಷ್ಮ ಗೆರೆಯನ್ನು ಸ್ಪಷ್ಟವಾಗಿ ಗುರುತಿಸಿದ್ದರು. ಮೊದಲಿಗೆ ಹಾಡುಗಾರಿಕೆಯಲ್ಲಿ ಸಾಹಿತ್ಯ, ರಚನಕಾರರ ಭಾವ, ಅದನ್ನು ಹಾಡುವ ವಿದ್ವಾಂಸರ ಭಾವ ಪ್ರಸರಣಗಳಿಗೆ ಹೆಚ್ಚು ಪ್ರಾಶಸ್ತ್ಯವಿರಲಿಲ್ಲ. ಅದೇ ಹಾಡುವ ಕ್ರಮವೂ ಆಗಿತ್ತು. ಆದರೆ ನಂತರದಲ್ಲಿ ಸಾಹಿತ್ಯ ಹಾಡುಗಾರರಿಗೆ ಬಹಳ ಮುಖ್ಯವೆಂಬ ವಿಚಾರ ಪ್ರಚಾರಕ್ಕೆ ಬಂತು. ಮುತ್ತುಸ್ವಾಮಿ ದೀಕ್ಷಿತರು ಹಾಗೂ ತ್ಯಾಗರಾಜರ ಕೃತಿಗಳಿಗೆ ನ್ಯಾಯ ಒದಗಿಸಬೇಕೆಂದರೆ, ಸಾಹಿತ್ಯಕ್ಕೆ ಮಹತ್ವ ನೀಡುವುದು ಎಂಬುದು ಪಟ್ಟಮ್ಮಾಳರ ವಾದ.

ಸಮಕಾಲೀನ ಯುವ ಸಂಗೀತಗಾರರಿಗೆ ಇರುವ ಸಂಗೀತ ಜ್ಞಾನದ ಬಗ್ಗೆ ಪಟ್ಟಮ್ಮಾಳರು ಆತಂಕ, ದುಃಖ ವ್ಯಕ್ತಪಡಿಸುತ್ತಾರೆ. ಇಂದಿನ ಸಂಗೀತಗಾರರು ಹಲವರು ಚೆನ್ನಾಗಿ ಹಾಡುವುದರೊಂದಿಗೆ ಸಂಗೀತವನ್ನು ಗಂಭೀರವಾಗಿ ಅಧ್ಯಯನ ನಡೆಸಿ ಹೊಸ ಪ್ರಯೋಗಗಳನ್ನು ನಡೆಸಿದರೂ ಅವರ ಮಹತ್ವಾಕಾಂಕ್ಷಿ ಧೋರಣೆಯನ್ನು ವಿರೋಧಿಸುತ್ತಾರೆ. ಎಲ್ಲರೂ ಹೊರ ದೇಶಗಳಲ್ಲಿ ಕಚೇರಿ ಮಾಡುವುದಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವುದನ್ನು ಆಕೆ ಒಪ್ಪಿಕೊಳ್ಳುತ್ತಾರೆ. ತಾಂತ್ರಿಕ ನಿಪುಣತೆ ಅವರ ರೆಕಾರ್ಡಿಂಗ್ ಹಾಗೂ ಹಾಡುವಿಕೆಯಲ್ಲಿ ಕಂಡು ಬರುತ್ತದೆ. ಇಂದಿನ ಸಂಗೀತಗಾರರಲ್ಲಿ ಸಂಗೀತದ ಕುರಿತು ಇರುವ ಧೋರಣೆಗಳಿಗೆ ಹಿಂದೆ ಇದ್ದಂತಹ 'ಗುರುಕುಲ' ಪದ್ಧತಿ ಇಂದು ಇರದೇ ಇರುವುದೂ ಕಾರಣವಾಗಿದೆ. ಗುರುಭಕ್ತಿಯೂ ಇಂದು ಕಂಡು ಬರುತ್ತಿಲ್ಲ. ಕೆಲವರಲ್ಲಿ ಇದ್ದರೂ ಅದು ನಶಿಸಿ ಹೋಗುತ್ತಲೇ ಇದೆ. ಇದಕ್ಕೆ ಕಾರಣ ಸಾಮಾಜಿಕ ಮೌಲ್ಯಗಳಲ್ಲಿ ಆಗುತ್ತಿರುವ ಪರಿವರ್ತನೆ, ಸ್ವಾರ್ಥ ಹಾಗೂ ಕಡಿಮೆಯಾಗುತ್ತಿರುವ ಸಂಗೀತದ ಆಸಕ್ತಿ ಎಂದು ಪಟ್ಟಮ್ಮಾಳ್ ಗುರುತಿಸುತ್ತಾರೆ. ಇಂದಿನ ಯುವ ಸಂಗೀತಗಾರರಿಗೆ ಗುರುಗಳ ಅಧ್ಯಾತ್ಮಿಕ ಶಕ್ತಿಯನ್ನು ಅರಿತುಕೊಳ್ಳುವ ಕುತೂಹಲ ಹಾಗೂ ಆಸಕ್ತಿ ಎರಡೂ ಇಲ್ಲ. ಸಂಗೀತ ಪರಿಣತಿ ಹೊಂದಲು ಸಂಗೀತದೆಡೆಗೆ ಬದ್ಧತೆ ಹಾಗೂ ಗುರುಗಳೆಡೆಗೆ ಭಕ್ತಿ ಇರಲೇಬೇಕೆಂಬ ಅಭಿಪ್ರಾಯ ಅವರದ್ದು. ಎರಡನೆಯದಾಗಿ ಆಕೆ ಇಂದಿನ

ಹಲವಾರು ವಿದ್ವಾಂಸರಲ್ಲಿ, ಅವರ ಸಂಗೀತದಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸಗಳೇನಿಲ್ಲ. ಪಟ್ಟಮ್ಮಾಳರು ವೃತ್ತಿ ಆರಂಭಿಸಿದ ಕಾಲದಲ್ಲಿ ಪ್ರತಿಯೊಬ್ಬ ವಿದ್ವಾಂಸನೂ ತನ್ನದೇ ಆದ ವಿಭಿನ್ನ ಶೈಲಿಯಿಂದ ಪ್ರಸಿದ್ಧಿ ಪಡೆದಿದ್ದರು. ಇಷ್ಟೆಲ್ಲ ಇದ್ದರೂ ಆಕೆ ಕರ್ನಾಟಕ ಸಂಗೀತದ ಭವಿಷ್ಯ ಭವ್ಯವಾಗಿದೆ ಎಂದೇ ಹೇಳುತ್ತಾರೆ. ಸಂಗೀತದ ಪಾವಿತ್ರ್ಯ ಕಾಪಾಡುವ ಮೂಲಕ ಸಂಗೀತಗಾರರು ಅದ್ಭುತ ಸಾಧನೆಗಳನ್ನು ಮಾಡಬಲ್ಲರು.

ಪಟ್ಟಮ್ಮಾಳರು ಬೆಳೆಯುತ್ತಿರುವ ಯುವ ಸಂಗೀತಗಾರರಿಗೆ ತಮ್ಮದೇ ಆದ ರೀತಿಯಲ್ಲಿ ಸಲಹೆಗಳನ್ನು ನೀಡುತ್ತಾರೆ. ಸಂಗೀತಗಾರರಾಗುವ ಬಯಕೆಯುಳ್ಳ ಪ್ರತಿಯೊಬ್ಬ ವಿದ್ವಾಂಸನಿಗೂ ತನ್ನ ಮಿತಿ ಹಾಗೂ ಶಕ್ತಿಗಳ ಅರಿವಿರಬೇಕು. ಶಕ್ತಿಗಳನ್ನು ದುಡಿಸಿಕೊಳ್ಳಬೇಕು. ಉದಾಹರಣೆಗೆ ಚೌಕ ಕಾಲದಲ್ಲಿ ಹಾಡುವುದರಲ್ಲಿ ಕೆಲವರಿಗೆ, ದುರಿತ ಕಾಲದಲ್ಲಿ ಹಾಡಲು ಕೆಲವರಿಗೆ ಅಪಾರ ಸಾಮರ್ಥ್ಯ ಇರುತ್ತದೆ. ಅವರು ಅದೇ ನಿಟ್ಟಿನಲ್ಲಿ ಅಭ್ಯಾಸ ಮಾಡಬೇಕು. ಪ್ರತಿ ವಿದ್ವಾಂಸನಲ್ಲೂ ಜನ್ಮದತ್ತವಾದ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಪೋಷಿಸುವ ಕೆಲಸವು ಬೆಳಗಿನ ಹೊತ್ತಿನಲ್ಲಿ ತೀವ್ರವಾಗಿ ಅಭ್ಯಾಸ ಮಾಡುವ ಮೂಲಕ ಅನಾವರಣಗೊಳ್ಳುತ್ತದೆ. ಯುವ ಸಂಗೀತಗಾರರು ಆಮಿಷಗಳಿಗೆ ಒಳಗಾಗದೆ, ಇತರ ಲಾಭಗಳನ್ನು ಬಯಸದೆ ಸಂಗೀತದಲ್ಲಿ ಮುಳುಗೇಳಬೇಕೆಂಬ ಸಲಹೆಯನ್ನು ಪಟ್ಟಮ್ಮಾಳ್ ನೀಡುತ್ತಾರೆ. ಹಿಂದಿನ ವಿದ್ವಾಂಸರು ಏರಿದ ಎತ್ತರಕ್ಕೆ ಏರಲು ಬದ್ಧತೆ, ಅದರೆಡೆಗಿನ ಭಕ್ತಿ ಮುಖ್ಯವೆಂದು ಪಟ್ಟಮ್ಮಾಳ್ ಹೇಳುತ್ತಾರೆ.

ಪಟ್ಟಮ್ಮಾಳರು ಸಾಂಪ್ರದಾಯಿಕ ಸಂಗೀತ ಪ್ರೇಮಿ ಆಗಿದ್ದರೂ ವಿಭಿನ್ನ ಬಗೆಯ ಸಂಗೀತ ಪ್ರಯೋಗಗಳಿಗೆ ವಿದ್ವಾಂಸರು ತೆರೆದುಕೊಳ್ಳುವುದನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದರು. ಸ್ವತಃ ಹಿಂದೂಸ್ತಾನಿ, ಲಘು ಸಂಗೀತ ಹಾಗೂ ಪಾಶ್ಚಾತ್ಯ ಶೈಲಿಯಾದ ಜ಼ಾಸ್ (Jazz) ಅನ್ನು ಆಲಿಸುತ್ತಾ ಆನಂದ ಹೊಂದುತ್ತಿದ್ದರು. ಇಂತಹ ಪ್ರಯತ್ನಗಳು ಪ್ರತಿಯೊಬ್ಬ ಸಂಗೀತಗಾರನಿಗೂ ತಮ್ಮದೇ ಆದ ವಿಶೇಷ ಶೈಲಿಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತವೆ ಎಂದು ಆಕೆ ತಿಳಿದಿದ್ದರು.

ಪಟ್ಟಮ್ಮಾಳರು ಶ್ರೋತೃಗಳ, ಅವರ ಪ್ರತಿಕ್ರಿಯೆಯ ಬಗ್ಗೆ ಸೂಕ್ಷ್ಮವಾಗಿ

ತಿಳಿದಿದ್ದರು. ಅವರ ಪ್ರತಿಕ್ರಿಯೆಗಳಿಂದ ಪಟ್ಟಮ್ಮಾಳರ ಕಚೇರಿಗಳ ಪ್ರಭಾವಿತ ವಾಗುತ್ತಿದ್ದವು. ಶ್ರೋತೃಗಳು ಕೇಳುವಿಕೆಯಲ್ಲಿ ತಲ್ಲೀನರಾಗಿ ಸೂಚಿಸುವ ಭಾವಗಳಿಂದ ಆಕೆ ಹೆಚ್ಚು ಪ್ರೇರಿತರಾಗುತ್ತಿದ್ದರು. ಇಂದಿನ ದಿನಗಳಲ್ಲಿ ಸಂಗೀತದ ಮಟ್ಟ ಕುಸಿಯುತ್ತಿದೆ ಎಂದು ಚಿಂತಿಸುತ್ತಿದ್ದರು. ಪ್ರೇಕ್ಷಕ ವರ್ಗದಲ್ಲೂ ಬದಲಾವಣೆ ಉಂಟಾಗಿರುವುದನ್ನು ಆಕೆ ಗಮನಿಸಿದ್ದರು. ಹಿಂದೆ ಶ್ರೋತೃಗಳು ಸಂಗೀತ ವಿನಿಕೆಯನ್ನು ಆನಂದಿಸುವುದರ ಜೊತೆಗೆ ಅದನ್ನು ಅರ್ಥ ಮಾಡಿಕೊಳ್ಳಲು ಸಮರ್ಥರಾಗಿದ್ದರು. ಆದರೆ ಇಂದಿನ ಕೇಳುಗರ ಸಂಗೀತ ಪರಿಜ್ಞಾನ ಕೇವಲ ತೋರಿಕೆಯಾಗಿ ಉಳಿದಿದೆ. ಹೆಚ್ಚಿನ ಮಂದಿ ಸಂಗೀತವನ್ನು ಆಸ್ವಾದಿಸಲು ಮಾತ್ರ ಬರುತ್ತಾರೆ ಅದರ ಭಾವವನ್ನು ತಿಳಿಯಲು ಅಲ್ಲ. ಹಿಂದಿನ ಕಾಲದಲ್ಲಿ ಕೇಳುಗರು ಸಂಗೀತ ಜ್ಞಾನ ಉಳ್ಳವರೂ, ಅದರೆಡೆಗೆ ತೀರದ ಆಸಕ್ತಿ ಬೆಳೆಸಿಕೊಂಡವರು ಹಾಗೂ ಹಾಡುಗಾರರಿಂದ ಉತ್ತಮ ಸಂಗೀತವನ್ನು ಬಯಸುವವರೂ ಆಗಿದ್ದರು. ಸಂಗೀತವನ್ನು ಬಹಳ ಆಸಕ್ತಿಯಿಂದ ಆಲಿಸುತ್ತಿದ್ದರು. ಇಂದಿನ ಶ್ರೋತೃಗಳಿಗೆ ಸಂಗೀತ ಒಂದು ಮನರಂಜನೆಯ ಸಾಧನ ಮಾತ್ರ. ಕೆಲವರು ಮಧ್ಯದಲ್ಲೇ ಕಚೇರಿಗಳಿಂದ ಎದ್ದು ಹೋಗುವುದೂ ಉಂಟು, ಇಂದಿನ ದಿನಗಳಲ್ಲಿ ಗಾನ ಗೋಷ್ಠಿಗಳ ಕಾಲಾವಧಿ ಬಹಳ ಚಿಕ್ಕದು. ಸಂಗೀತಗಾರರು ಆ ಸಮಯದಲ್ಲೂ ವೇಗವಾಗಿ ಹಾಡುವ ಮೂಲಕ ಸಮಯ ಕಳೆಯುತ್ತಾರೆ. ಕರ್ನಾಟಕ ಸಂಗೀತವು ಒಂದು ದೈವೀ ಕಲೆ ಅದನ್ನು ಹಾಗೇ ಉಳಿಸಬೇಕು ಎನ್ನುವುದು ಅವರ ನಿಲುವು. ಕೇವಲ ಚಪ್ಪಾಳೆ ಗಿಟ್ಟಿಸಲು, ಖ್ಯಾತಿ ಪಡೆಯಲು ಇಂದಿನ ಹಾಡುಗಾರರು ಸ್ವರದ ನಂತರ **'ಕಾರ್ವೈ'** ಹಾಡುವುದನ್ನು ಆಕೆ ಒಪ್ಪುವುದಿಲ್ಲ. ಯುವ ಸಂಗೀತಗಾರರಿಗೆ ಭಾವ ಸ್ಫುರಣೆಯಾಗುವಂತೆ ಸಂಗೀತದ ಆಳಕ್ಕೆ ಇಳಿದು ಹಾಡುವ ಸಲಹೆಯನ್ನು ಪಟ್ಟಮ್ಮಾಳ್ ನೀಡುತ್ತಾರೆ.

ಪಟ್ಟಮ್ಮಾಳರು ಹೇಳುವಂತೆ ಹಾಡುವಾಗ ಹಾಡುವವರ ಮನೋಧರ್ಮ ಎದ್ದು ಕಾಣುವಂತಿರಬೇಕು. ಹಾಡಿನ ವಿಸ್ತಾರ ಹಾಗೂ ಆಳದ ಅರಿವು ಇರಬೇಕು. **'ಕಲ್ಪನ ಸ್ವರ'**ಗಳನ್ನು ರಾಗ, ಭಾವ ತುಂಬಿ ಹಾಡಬೇಕೆಂದು ಆಕೆ ಹೇಳುತ್ತಾರೆ. ಆಲಾಪನೆಗಳನ್ನು ವಿಸ್ತರಿಸುವ ಅಗತ್ಯವಿಲ್ಲ. ಐದು ನಿಮಿಷಗಳ ಆಲಾಪನೆಯು ರಾಗದ ಸತ್ವವನ್ನು ತಿಳಿಸಲು ಸಾಕಾಗುತ್ತದೆ. ಹಾಡುಗಾರರಿಗೆ ಹಾಡುವ ಭಾಷೆಯು ಸರಿಯಾಗಿ ತಿಳಿದಿದ್ದರೆ ಹಾಡಿನ ಭಾವವನ್ನು ವ್ಯಕ್ತಪಡಿಸಬಹುದೆಂದು ಅಭಿಪ್ರಾಯ ಪಡುತ್ತಾರೆ.

ಸಂಗೀತ ದೇವರೆಡೆಗಿನ ಭಕ್ತಿಯ ಜೊತೆ ಜೊತೆಗೆ ರಚನಕಾರರ ಬಗ್ಗೆಯೂ ಭಕ್ತಿ ಇರಬೇಕೆಂದು ಅವರ ವಾದ. ಕರ್ನಾಟಕ ಸಂಗೀತದ ಉಳಿವಿನಲ್ಲಿ ರಚನಕಾರರ ಪಾತ್ರವೂ ಇದೆ. ಇಂದಿನ ಕಚೇರಿಗಳಲ್ಲಿ ಪಲ್ಲವಿಗೆ ಮುಖ್ಯ ಸ್ಥಾನ ನೀಡದಿರುವ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. ಪಲ್ಲವಿಯೇ ಪ್ರಮುಖ ಭಾಗವಾದ ಸಾಂಪ್ರದಾಯಿಕ ಗಾನ ಗೋಷ್ಠಿಗಳು ಇಲ್ಲವಾಗುತ್ತಿರುವ ಬಗ್ಗೆ ಕಳವಳದಿಂದ ಮಾತನಾಡುತ್ತಾರೆ. ಪಲ್ಲವಿ ಹಾಡುವಿಕೆಯನ್ನು ಕಲಿಯುವುದು ಬಹಳ ಕಷ್ಟಕರ ಇಂದಿನ ಯುವ ಹಾಡುಗಾರರಲ್ಲಿ ಅದಕ್ಕೆ ಬೇಕಾದ ಸಿದ್ಧತೆ ಇಲ್ಲದಿರುವುದು ವಿಪರ್ಯಾಸ. ಕಡೆಯ ಪಕ್ಷ ನಲವತ್ತೈದು ನಿಮಿಷಗಳಾದರೂ ಪಲ್ಲವಿ ಹಾಡಬೇಕೆನ್ನುವುದು ಅವರ ಸಲಹೆ.

■

## ಸನ್ಮಾನ, ಮನ್ನಣೆ ಹಾಗೂ ಪ್ರಶಸ್ತಿಗಳು

**ಕ**ರ್ನಾಟಕ ಸಂಗೀತ ಕ್ಷೇತ್ರದಲ್ಲಿ ಪಟ್ಟಮ್ಮಾಳ್ ಅವರ ಸಾಧನೆ ಅಗಾಧವಾದದ್ದು. 1936ರಿಂದಲೂ **'ಮದ್ರಾಸ್ ಮ್ಯೂಸಿಕ್ ಅಕಾಡೆಮಿ'**ಯಲ್ಲಿ ಅವರನ್ನು ಕಚೇರಿ ನಡೆಸಿಕೊಡಲು ಖಾಯಂ ಆಗಿ ಆಹ್ವಾನಿಸುತ್ತಿದ್ದರು. **'ತಮಿಳು ಇಸೈ ಸಂಘಂ'** ಹಾಗೂ **'ಮದ್ರಾಸ್ ಮತ್ತು ಭಾರತೀಯ ಲಲಿತ ಕಲಾ ಅಕಾಡೆಮಿ'**ಯಲ್ಲೂ ನಿಯಮಿತವಾಗಿ ಗಾನಗೋಷ್ಠಿ ನಡೆಸಿಕೊಡುತ್ತಿದ್ದರು.

1955ರಲ್ಲಿ ಅಂದಿನ ರಾಷ್ಟ್ರಪತಿ ಶ್ರೀ ರಾಜೇಂದ್ರಪ್ರಸಾದ್ ಅವರಿಗೆ ಅಭಿನಂದನಾ ಸಮಾರಂಭವನ್ನು ಮದರಾಸಿನ ರಾಜಭವನದಲ್ಲಿ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಪಟ್ಟಮ್ಮಾಳರು ಗಾಯನ ನಡೆಸಿಕೊಟ್ಟರು. ಪ್ರೇಕ್ಷಕ ವರ್ಗದಲ್ಲಿ ಅಂದಿನ ಮದರಾಸು ರಾಜ್ಯದ ಮುಖ್ಯ ಮಂತ್ರಿ ಶ್ರೀ ಕಾಮರಾಜ್, ಗವರ್ನರ್ ಆಗಿದ್ದಂತಹ ಶ್ರೀ ಶ್ರೀಪ್ರಕಾಶ್ ಅವರು ಉಪಸ್ಥಿತರಿದ್ದರು. ದೀಕ್ಷಿತರ ಕೃತಿಗಳನ್ನು ಪಟ್ಟಮ್ಮಾಳ್ ಹಾಡಿದಾಗ ಅತೀವ ಸಂತಸ ವ್ಯಕ್ತಪಡಿಸಿದ ರಾಷ್ಟ್ರಪತಿಗಳು **'ಚೇತ ಶ್ರೀಬಾಲಕೃಷ್ಣಂ'** ಎಂಬ ಹಾಡನ್ನು ಪುನಃ ಹಾಡಲು ಮನವಿ ಮಾಡಿಕೊಂಡು ನಂತರ ಬಹುವಾಗಿ ಶ್ಲಾಘಿಸಿದ್ದರು.

ಪಟ್ಟಮ್ಮಾಳ್‌ರ ಮೊದಲ ಗಾನಗೋಷ್ಠಿ 1934ರಲ್ಲಿ ಮುಂಬೈನಲ್ಲಿ ನಡೆಯಿತು. ಹಲವಾರು ತಮಿಳು ಹಾಡುಗಳನ್ನು ಅಲ್ಲಿ ಹಾಡಿದರು. ಅಂದಿನಿಂದ ಅನೇಕ ಬಾರಿ ಮುಂಬೈಗೆ ಕಚೇರಿ ನೀಡುವ ಸಲುವಾಗಿ ಭೇಟಿಕೊಟ್ಟರು. ವಿದೇಶಗಳಲ್ಲೂ ವ್ಯಾಪಕವಾಗಿ ಸಂಚರಿಸಿ ಕರ್ನಾಟಕ ಸಂಗೀತದ ಸುಧೆ ಹರಿಸಿದರು. 1977ರಲ್ಲಿ ಪಿಟ್ಸ್‌ಬರ್ಗ್‌ನ ಶ್ರೀವೆಂಕಟೇಶ್ವರ ಸ್ವಾಮಿಗೆ ಅಲ್ಲಿನ ದೇವಾಲಯದಲ್ಲಿ ನಾದ ಸೇವೆ ಸಮರ್ಪಿಸಿದರು. ಯಾರ್ಕ್ (York) ವಿಶ್ವವಿದ್ಯಾಲಯದಲ್ಲಿ ಸಂಗೀತದ ರಸಧಾರೆ ಹರಿಸಿದರು. ಉತ್ತರ ಅಮೇರಿಕಾದ **'ಕರ್ನಾಟಿಕ್ ಮ್ಯೂಸಿಕ್ ಅಸೋಸಿಯೇಷನ್'**ನಲ್ಲಿಯೂ ಗಾನಗಂಗೆ ಹರಿದಳು. 1985ರಲ್ಲಿ 'ಭಾರತ ಹಬ್ಬ'ದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರ ವಿನಂತಿಯ ಮೇರೆಗೆ ಉತ್ತರ-ದಕ್ಷಿಣ

ಭಾರತಗಳ ಭಾವೈಕ್ಯತೆ ಬಿಂಬಿಸುವ ಹಾಡನ್ನು ಧ್ವನಿ ಮುದ್ರಿಸಿದರು. ಬರ್ಲಿನ್, ಬಾನ್, ಜಿನೀವಾ, ಕೆನಡಾ, ಯು.ಎಸ್.ಎಸ್.ಆರ್. ಮುಂತಾದ ದೇಶವಾಸಿಗಳಿಗೆ ತಮ್ಮ ಸಂಗೀತ ಸುಧೆ ಉಣಿಸಿ ತಣಿಸಿದರು. 1977ರಲ್ಲಿ ಪಶ್ಚಿಮ ಜರ್ಮನಿಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಇವರನ್ನು ಆಹ್ವಾನಿಸಲಾಗಿತ್ತು.

ಪಟ್ಟಮ್ಮಾಳ್‌ರನ್ನು ಹಲವಾರು ಪ್ರಶಸ್ತಿ, ಗೌರವ, ಮನ್ನಣೆಗಳು ಅರಸಿ ಬಂದವು. ಆಲ್ ಇಂಡಿಯಾ ರೇಡಿಯೋದಲ್ಲಿ ಐವತ್ತು ವರ್ಷಗಳಿಗೂ ಮೀರಿ ಹಾಡುತ್ತಾ ತರಗತಿಗಳನ್ನು ನಡೆಸುತ್ತಾ ಬಂದರು. ಪಟ್ಟಮ್ಮಾಳ್ ಎಂದರೆ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು ಎನ್ನುವ ಮಟ್ಟಕ್ಕೆ ಹೆಸರು ಮಾಡಿದರು. ಅವರು ಹಾಡಿದಂತಹ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಭಾರತ ಸರ್ಕಾರ ದಾಖಲಿಸಿದೆ. 1ನೇ ಜನವರಿ 2000 ಇಸವಿಯು ಹೊಸ ಮಿಲೆನಿಯಂ ಪ್ರಾರಂಭ. ಅಂದಿನ ದಿನ ಚೆನ್ನೈನ 'ಯೂಥ್ ಅಸೋಸಿಯೇಷನ್ ಫಾರ್ ಕ್ಲಾಸಿಕಲ್ ಮ್ಯೂಸಿಕ್' ಸಂಸ್ಥೆಯು ಪಟ್ಟಮ್ಮಾಳ್‌ರ ಸಂಗೀತದೊಂದಿಗೆ ಹೊಸ ಸಹಸ್ರಮಾನವನ್ನು ಸ್ವಾಗತಿಸಿತು. ಅದೇ ಸಂಸ್ಥೆಯ ಎರಡನೇ ವಾರ್ಷಿಕೋತ್ಸವವನ್ನು 1982ರಲ್ಲಿ ಪಟ್ಟಮ್ಮಾಳರೇ ಉದ್ಘಾಟಿಸಿದರು. ಅದೇ ವರ್ಷ 'ಶ್ರೀ ಜಯೇಂದ್ರ ಭಕ್ತಿ ಸಂಘಂ' ಸಂಸ್ಥೆಯ 2ನೇ ವಾರ್ಷಿಕೋತ್ಸವವೂ ನಡೆಯಿತು. ತಮಿಳು ಹೊಸ ವರ್ಷವೂ ಆದ ಆ ದಿನ ಪಟ್ಟಮ್ಮಾಳ್‌ರ ಗಾನ ರಸಧಾರೆಯಲ್ಲಿ ಮುಳುಗೆದ್ದಿತು. ಎನ್.ಕೆ. ವಿಷನ್ಸ್ ಅವರು ಡಿ.ಡಿ. ಭಾರತಿಯಲ್ಲಿ ಕರ್ನಾಟಕ ಸಂಗೀತದ ಮಹಾನ್ ಸಾಧಕರನ್ನು ಗುರುತಿಸಿ ಪಟ್ಟಮ್ಮಾಳ್‌ರ ವಿಶೇಷ ಪರಿಚಯ ನೀಡಿತ್ತು. ತ್ಯಾಗರಾಜರ ಆರಾಧನಾ ಮಹೋತ್ಸವವನ್ನು ಉದ್ಘಾಟಿಸಿದ ಮೊತ್ತ ಮೊದಲ ಮಹಿಳಾ ಕಲಾವಿದೆ ಎಂಬ ಕೀರ್ತಿ ಪಟ್ಟಮ್ಮಾಳ್ ಅವರಿಗೆ ಸಲ್ಲುತ್ತದೆ.

ಪಟ್ಟಮ್ಮಾಳ್ ಮುಡಿಗೇರಿದ ಕೀರ್ತಿ ಕಿರೀಟಕ್ಕೆ ಅಸಂಖ್ಯ ಗರಿಗಳು ಬಂದು ಸೇರಿಕೊಂಡಿವೆ. ಪ್ರಮುಖವಾದ ಪ್ರಶಸ್ತಿ, ಬಿರುದುಗಳನ್ನು ಇಲ್ಲಿ ನೀಡಲಾಗಿದೆ.

1. ರಾಷ್ಟ್ರಪತಿ ಪುರಸ್ಕಾರ, 1962
2. ಸಂಗೀತ ಕಲಾನಿಧಿ ಪ್ರಶಸ್ತಿ, 1970, ಮದರಾಸ್ ಮ್ಯೂಸಿಕ್ ಅಕಾಡೆಮಿ
3. ಪದ್ಮ ಭೂಷಣ ಪ್ರಶಸ್ತಿ, 1971, ಭಾರತ ಸರ್ಕಾರ
4. ಇಸೈ ಪೆರಾರಿಗ್ನಾರ್ ಪ್ರಶಸ್ತಿ–ತಮಿಳ್ ಇಸೈ ಸಂಘಂ

5. ಕಲಾ ಪ್ರವೀಣ ಪ್ರಶಸ್ತಿ, ಮಥುರಾ
6. ಉಸ್ತಾದ್ ಹಾಫಿಜ್ ಅಲಿಖಾನ್, 1989, ಮುಂಬೈ ಕೊಯಮತ್ತೂರು
8. ಗಾನ ಸರಸ್ವತಿ ಬಿರುದು, ಹುಲಿ ವರದಾಚಾರ್ಯಾರ್
9. ಅಭಿನಂದನೆ, 1998 (ಅವರ 80ನೇ ಹುಟ್ಟು ಹಬ್ಬದಂದು) ಕೊಟ್ಟುಪುರಂನ 'ನಾಯಕಿ' ಇಂದ
10. ಸಂಗೀತ ಸಾರ್ವಭೌಮ ಬಿರುದು–ಶ್ರೀಚೆಂಬೈ ವಿದ್ಯಾನಾಥ ಅಯ್ಯರ್ ಸ್ಮರಣಾರ್ಥ
11. ಕಲಾ ರತ್ನ, 1998, ರಸಿಕ ರಂಜಿನಿ ಸಭಾ, ಮದರಾಸು
12. ಕಾಳಿದಾಸ ಸಮ್ಮಾನ್, 1999, ಮಧ್ಯಪ್ರದೇಶ ಸರ್ಕಾರ
13. ಪದ್ಮ ವಿಭೂಷಣ, 1999, ಭಾರತ ಸರ್ಕಾರ
14. ಸ್ವಾತಿ ಪುರಸ್ಕಾರ, 1999, ಕೇರಳ ಸಂಗೀತ ನಾಟಕ ಅಕಾಡೆಮಿ, ಕೇರಳ ಸರ್ಕಾರ
15. ಸ್ವರಾಲಯ ಪುರಸ್ಕಾರ, 2001, ಸ್ವರಾಲಯ, ದೆಹಲಿ (ಸಾಂಸ್ಕೃತಿಕ ಸಂಘ)
16. ಸಂಗೀತ ಕಲಾನಿಧಿ, 2003, ರಾಜಲಕ್ಷ್ಮಿ ಆಡಿಯೋ, ಕೊಯಮತ್ತೂರು
17. ಸಂಗೀತ ಸಾಗರ ರತ್ನ, 2003, ರಾಜಲಕ್ಷ್ಮಿ ಫೈನ್ ಆರ್ಟ್ಸ್, ಚೆನ್ನೈ
18. ಸಂಗೀತ ಸಾಮ್ರಾಜ್ಞಿ, 2004, ಭಾರತ್ ಕಲಾಚಾರ್, ಚೆನ್ನೈ
19. ನಾರದ ಬ್ರಹ್ಮಂ, 2004, ನಾರದ ಗಾನ ಸಭಾ, ಚೆನ್ನೈ
20. ಶಿವನ್ ಇಸೈ ಸೆಲ್ವಿ ಪುರಸ್ಕಾರ, 2005, ಭಾರತೀಯ ವಿದ್ಯಾ ಭವನ
21. ಜೀವಮಾನದ ಸಾಧನೆ ಪ್ರಶಸ್ತಿ, 2005, ಎ.ವಿ.ಎಂ. ಶರವಣನ್
22. ಶತಮಾನೋತ್ಸವ ಪ್ರಶಸ್ತಿ, 2005, ಬೆಂಗಳೂರು ಗಾಯನ ಸಮಾಜ

# ಕಿರಿಯರಿಗೆ ಮಾರ್ಗದರ್ಶನ

**ಕ**ರ್ನಾಟಕ ಸಂಗೀತ ಕ್ಷೇತ್ರಕ್ಕೆ ಪಟ್ಟಮ್ಮಾಳ್ ಅವರ ಕೊಡುಗೆ ಅನನ್ಯ. ವೈಯಕ್ತಿಕವಾಗಿ ಸಾಧನೆಯ ಮೇರು ಶಿಖರ ಏರಿದ್ದೇ ಅಲ್ಲದೆ ತಮ್ಮ ಶಿಷ್ಯ ಬಳಗದ ಮೂಲಕ ತಮ್ಮ ಅತ್ಯಮೂಲ್ಯ ಸಂಗೀತ ಜ್ಞಾನವನ್ನು ಜಗತ್ತಿನೆಲ್ಲೆಡೆ ಹರಡಿಸಿ ಸಂಗೀತದ ಗಂಧವನ್ನು ಪಸರಿಸಿದರು. ಶಿಷ್ಯರ ಅಭಿವೃದ್ಧಿಯ ಬಗ್ಗೆ ಅತೀವ ಕಾಳಜಿ ಹೊಂದಿದ್ದರು. ಸಮರ್ಥ ಶಿಕ್ಷಕಿಯಾಗಿ ಹಲವಾರು ಮಂದಿಗೆ ದಾರಿ ದೀಪವಾದರು. ಸಂಗೀತದ ಸಾಂಪ್ರದಾಯಿಕತೆಯನ್ನು ರಕ್ಷಿಸಬೇಕೆನ್ನುವ ತುಡಿತ ಅವರಲ್ಲಿತ್ತು. ಆಕೆಯ ತಮ್ಮ ಡಿ.ಕೆ. ಜಯರಾಮ್ ಅವರು ಅಕ್ಕನಿಂದ ಸಂಗೀತ ಕಲಿತು ಪ್ರಸಿದ್ಧ ಸಂಗೀತಗಾರರಾಗಿ ಬೆಳೆದರು. ಅಕ್ಕನ ನಿರೀಕ್ಷೆಗೂ ಮೀರಿ ಯಶಸ್ಸಿನ ತುತ್ತ ತುದಿ ಏರಿದರು. ಪಟ್ಟಮ್ಮಾಳ್ ಅವರ ಜೊತೆಯಲ್ಲಿ ಕಚೇರಿಗಳಲ್ಲಿ ಹಾಡುತ್ತಿದ್ದರು. ಪಟ್ಟಮ್ಮಾಳರ ಸೊಸೆ ಲಲಿತಾ ಸಹ ಅವರಲ್ಲಿ ಸಂಗೀತ ಕಲಿತು ಅವರೊಡನೆಯೇ ಕಚೇರಿ ನೀಡುವ ಮಟ್ಟಕ್ಕೆ ಬೆಳೆದರು. ತಮ್ಮ ಮೊಮ್ಮಗಳಾದ ನಿತ್ಯಶ್ರೀ ಮಹದೇವನ್ ಅವರಿಗೂ ಪಟ್ಟಮ್ಮಾಳ್ ಗುರುವಾಗಿದ್ದರು. ಇಂದು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ನಿತ್ಯಶ್ರೀ ಅವರ ಹೆಸರು ವಿಶ್ವ ಖ್ಯಾತಿ ಪಡೆದಿದೆ.

ಪಟ್ಟಮ್ಮಾಳ್ ಅವರು ಶಿಸ್ತಿನ ಜೀವನ ನಡೆಸುತ್ತಿದ್ದರು. ತಮ್ಮ ಶಿಷ್ಯರೂ ಸಹ ತಮ್ಮಂತೆಯೇ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತಿದ್ದರು. ತಾವು ಹೇಳಿಕೊಡುವ ಸಂಗೀತ ಪಾಠಗಳನ್ನು ಯಾರೂ ಬರೆದುಕೊಳ್ಳುವಂತಿರಲಿಲ್ಲ. ಮೌಖಿಕವಾಗಿ ಹೇಳಿಕೊಡುವುದರ ಮೂಲಕ ಮತ್ತೆ ಮತ್ತೆ ಅದನ್ನೇ ಪುನರಾವರ್ತಿಸುವ ಮೂಲಕ ಕಲಿಸುತ್ತಿದ್ದರು. ಪಟ್ಟಮ್ಮಾಳ್ ಅವರು ಯಾವುದೇ ಕೃತಿಗಳ ಮೂಲಕ್ಕೆ ಧಕ್ಕೆ ಬಾರದಂತೆ, ರಚನಕಾರರ ಭಾವಕ್ಕೆ ಚ್ಯುತಿಯಾಗದಂತೆ ಹಾಡಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದರು. ಅವರ ಕಲಿಸುವ ಸಾಮರ್ಥ್ಯ, ಅವರ ಕಲಿಸುವ ಶೈಲಿ ಇತ್ಯಾದಿಗಳಿಂದ ಆಕರ್ಷಿತರಾಗಿ ಅನೇಕರು ಅವರಲ್ಲಿ ಶಿಷ್ಯತ್ವ ವಹಿಸಿದರು. ಜಪಾನ್, ಫ್ರಾನ್ಸ್,

ಸಿಂಗಪೂರ್‌ಗಳಿಂದ ಬಂದು ಪಟ್ಟಮ್ಮಾಳರಲ್ಲಿ ಸಂಗೀತ ಕಲಿಯುತ್ತಿದ್ದರು. ಅವರ ಒಬ್ಬ ಶಿಷ್ಯ ಚೌ–ಚ್ಯೂ ಸೆನ್ ಕೌಲಾಲಂಪುರದಿಂದ ಬಂದಿದ್ದು ಸಂಗೀತ ಕಲಿಯುತ್ತಿದ್ದ. ಆತನ ವಾಕ್ ಸಾಮರ್ಥ್ಯ, ಗ್ರಹಣ ಶಕ್ತಿ ಮತ್ತು ಕಲಿಕಾ ವೈಖರಿಯಿಂದ ಪಟ್ಟಮ್ಮಾಳ್ ಸಂಪ್ರೀತರಾಗಿದ್ದರು. ಕಠಿಣ ಪರಿಶ್ರಮದಿಂದ ಕಲಿಯುತ್ತ ಆಶು ಕೃತಿಗಳನ್ನು ರಚಿಸುವ ಮಟ್ಟಕ್ಕೆ ಆತನನ್ನು ಗುರುವಾದ ಪಟ್ಟಮ್ಮಾಳ್ ಬೆಳೆಸಿದರು.

ಪಟ್ಟಮ್ಮಾಳರು ಶಿಷ್ಯರಿಗೆ ಕಲಿಸುವಾಗ, ಅವರಿಗೆ ತಾವೇನು ಕಲಿಯುತ್ತಿದ್ದೇವೆಯೋ ಅದರ ಆಂತರಿಕ ಸೌಂದರ್ಯದ ಅನುಭೂತಿ ಉಂಟಾಗುವಂತೆ ಕಲಿಸುತ್ತಿದ್ದರು. ಕರ್ನಾಟಕ ಸಂಗೀತದ ವಿಸ್ತಾರವನ್ನು, ಆಳವನ್ನು ಅರಿತಿದ್ದ ಅವರು ಅತ್ಯುತ್ತಮ ಶಿಕ್ಷಕಿಯಾಗಿದ್ದರು. ಕರ್ನಾಟಕ ಸಂಗೀತದ ತಲಸ್ಪರ್ಶಿ ಅಧ್ಯಯನ ಮಾಡಲು ಇಡೀ ಜೀವಮಾನ ಸಾಕಾಗದು ಎಂದು ಹೇಳುತ್ತಿದ್ದರು. ಸಂಗೀತ ಪ್ರೇಮಿಗಳು ಫ್ರೆಂಚ್, ಜರ್ಮನ್, ಅಮೆರಿಕ, ಕೆನಡಾ ಹಾಗೂ ಜಪಾನ್ ದೇಶಗಳಿಂದ ಬಂದು ಪಟ್ಟಮ್ಮಾಳರ ಶಿಷ್ಯತ್ವ ವಹಿಸುತ್ತಿದ್ದರು. ಅಂತಹವರಲ್ಲಿ ಅಕಿಕೊ ಎಂಬ ಜಪಾನೀ ಶಿಷ್ಯನನ್ನು ಪಟ್ಟಮ್ಮಾಳ್ ಬಹುವಾಗಿ ಮೆಚ್ಚಿಕೊಂಡಿದ್ದರು. ಆತ ತಿರುವಾಯೂರಿನಲ್ಲಿ ತ್ಯಾಗರಾಜರ ಆರಾಧನೆಯ ಸಮಯದಲ್ಲಿ ಚಿತ್ತಾಕರ್ಷಕವಾಗಿ ಹಾಡಿ ಗುರುಗಳಿಗೆ ಸಂತಸ ಉಂಟು ಮಾಡಿದನು.

# ವ್ಯಕ್ತಿತ್ವದ ಒಳನೋಟ

**ಪ**ಟ್ಟಮ್ಮಾಳರು ದೇಶ ಭಕ್ತಿ ಗೀತೆಗಳನ್ನು ಸಿನಿಮಾಗಳಲ್ಲಿ ಹಾಡುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೂ ತಮ್ಮ ಅಳಿಲು ಸೇವೆ ನೀಡಿದ್ದಾರೆ. ಸಿನಿಮಾಗಳಲ್ಲಿ ರಮ್ಯ ಗೀತೆಗಳನ್ನು ಹಾಡಲು ಆಕೆ ಪ್ರಜ್ಞಾಪೂರ್ವಕವಾಗಿಯೇ ನಿರಾಕರಿಸಿದರು. ಪಟ್ಟಮ್ಮಾಳ್ 'ತ್ಯಾಗಭೂಮಿ' (1939) ಹಾಗೂ 'ನಾಮ್ ಇರುವರ್' (1947) ಚಿತ್ರಗಳಲ್ಲಿ ಹಾಡಿದ್ದಾರೆ. ಭಾರತಿಯಾರ್ ಮತ್ತು ಮುತ್ತು ತಂದವರ್ ಅವರುಗಳ ರಚನೆಗಳನ್ನು ಪಟ್ಟಮ್ಮಾಳ್ ಜನಪ್ರಿಯಗೊಳಿಸಿದರು. ಆಕೆ ಹಾಡುಗಳನ್ನು ಗಾನಗೋಷ್ಠಿಗಳಲ್ಲಿ ಸಂಗೀತಗಾರರು ಹಾಡುವುದನ್ನು ಕೇಳಿ ಕಲಿಯುತ್ತಿದ್ದರು. ಅಂದಿನ ದಿನಗಳಲ್ಲಿ ಸಾಹಿತ್ಯ ದೊರಕುವುದು ದುರ್ಲಭವಾಗಿತ್ತು. ಅರಿಯಕುಡಿ ಅವರ ಶಿಷ್ಯ ವೈದ್ಯನಾಥನ್ ಪಟ್ಟಮ್ಮಾಳರಿಗೆ ಅರುಣಾಚಲ ಕವಿರಾಯರ್‌ರ ಹಾಡುಗಳನ್ನು ಕಲಿಸಿದರು. 'ತೇವರಂ' ಹಾಡುಗಳಾದ 'ಸಿರೈ ಅರುಂ', 'ಅದುಕ್ಕಣ್ಣೈ' ಮತ್ತು 'ಭಂತತಾಲ್' ಗಳನ್ನು ಕಾಂಚೀಪುರದಲ್ಲಿ ನಡೆಯುತ್ತಿದ್ದ ಕಚೇರಿಗಳಲ್ಲಿ ಚಿಕ್ಕ ವಯಸ್ಸಿನಲ್ಲೇ ಕಲಿತರು. ಹೆಸರಾಂತ ಸಿನಿಮಾ ನಿರ್ದೇಶಕ ಕೆ. ಸುಬ್ರಮಣಿಯನ್ ಹಾಗೂ ಖ್ಯಾತ ರಚನೆಕಾರ ಪಾಪನಾಶಂ ಶಿವನ್ ಅವರಿಂದ ಪಟ್ಟಮ್ಮಾಳರು ಸಿನಿಮಾ ಜಗತ್ತಿಗೆ ಪಾದಾರ್ಪಣೆ ಮಾಡಿದರು.

ಆಗಸ್ಟ್ 15, 1947ರ ಹಿಂದಿನ ದಿನ ಪಟ್ಟಮ್ಮಾಳರನ್ನು ಆಲ್ ಇಂಡಿಯಾ ರೇಡಿಯೋದಲ್ಲಿ ಹಾಡಲು ಆಹ್ವಾನಿಸಲಾಗಿತ್ತು. ಅಂದು ದೇಶ ಭಕ್ತಿ ಗೀತೆಗಳನ್ನು ಹಾಡಿದರು. ರೆಕಾರ್ಡಿಂಗ್ ಆದ ನಂತರ ಸಂಭಾವನೆ ಸ್ವೀಕರಿಸಲು ನಿರಾಕರಿಸಿದರು. ಕೇಂದ್ರ ಮಂತ್ರಿಗಳು ಈ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಿ ಅವರನ್ನು ಒಪ್ಪಿಸಲು ಯತ್ನಿಸಿದರೂ ಆಕೆ ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಇದು ಅವರಿಗಿದ್ದ ದೇಶ ಪ್ರೇಮದ ಪರಾಕಾಷ್ಠತೆಯನ್ನು ತೋರಿಸುತ್ತದೆ. ದೇಶ ಭಕ್ತಿಯು ಚಿಕ್ಕಂದಿನಿಂದಲೂ ಅವರ ರಕ್ತದಲ್ಲಿಯೇ ಸೇರಿ ಹೋಗಿತ್ತು. ಅವರ ತಂದೆ-ತಾಯಿ ಮತ್ತು ಪತಿಯ ಮನೆಯವರೂ ಸಹ ದೇಶ ಪ್ರೇಮದ ಹೊನಲಲ್ಲಿ ಮುಳುಗಿದ್ದವರು. ಈಶ್ವರನ್ ಅವರ ಚಿಕ್ಕಪ್ಪ ಪಿ.ಎಸ್. ಶ್ರೀನಿವಾಸನ್ ಅವರು ಪಟ್ಟಮ್ಮಾಳರಿಗೆ ಗಾಂಧೀಜಿಯವರ ಹಾಡುಗಳನ್ನು ಪರಿಚಯಿಸಿದರು. 1930ರಲ್ಲಿ ಗಾಂಧೀಜಿಯವರು ಕಾಂಚೀಪುರಕ್ಕೆ ಭೇಟಿ

ನೀಡಿದಾಗ ಅವರೆದುರು ಹಾಡುವ ಸೌಭಾಗ್ಯ ದೊರೆಯಿತು. 'ವೀರ ಸ್ವಾತಂತ್ರ್ಯಂ ವೆಂಡಿ ನಿಂಡ್ರಾರ್' ಎಂಬ ಹಾಡನ್ನು ಪಟ್ಟಮ್ಮಾಳ್ ಸ್ವತಃ ರಚಿಸಿ ಸ್ವರ ಸಂಯೋಜಿಸಿ ಹಾಡಿದರು. ಪಟ್ಟಮ್ಮಾಳ್ ತಮ್ಮ ಕಚೇರಿಗಳಲ್ಲಿ 'ಉನ್ರು ತನಿಯಂ ಇಂಥ ಸ್ವಾತಂತ್ರ್ಯ ರಾಗಂ' ಎಂಬ ಹಾಡನ್ನು ಹಾಡುತ್ತಿದ್ದರು. ಬ್ರಿಟೀಷರ ಆಳ್ವಿಕೆಯಲ್ಲಿ ಆ ಹಾಡನ್ನು ಹಾಡುವುದು ಕ್ರಾಂತಿಕಾರಕವಾಗಿತ್ತು. ತಿರುನಲ್ವೇಲಿಯಲ್ಲಿ ಆಕೆ ಸುಬ್ರಹ್ಮಣ್ಯ ಭಾರತಿಯಾರರ ಹಾಡುಗಳನ್ನು ಹಾಡಿದಾಗ ಅಲ್ಲಿ ಇದ್ದಂತಹ ಒಬ್ಬ ಮಹಿಳೆ ಭಾವಾತಿರೇಕದಿಂದ ಕಣ್ಣೀರು ಸುರಿಸಿದರು.

ಪಟ್ಟಮ್ಮಾಳರ ದೇಶ ಪ್ರೇಮ ವ್ಯಕ್ತವಾದ ಮತ್ತೊಂದು ಪ್ರಸಂಗವೆಂದರೆ, ಇತ್ತೀಚಿನ ಕಾರ್ಗಿಲ್ ಯುದ್ಧದ ಸಂದರ್ಭ. ಕರ್ನಾಟಕ ಸಂಗೀತಗಾರರ 'ಕಾರ್ಗಿಲ್ ಪರಿಹಾರ ನಿಧಿ ಟ್ರಸ್ಟ್' ಚೆನ್ನೈನಲ್ಲಿ ಕಚೇರಿಗಳನ್ನು ಏರ್ಪಡಿಸಿತ್ತು. ಪಟ್ಟಮ್ಮಾಳ್ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಯೋಧರ ಬಲಿದಾನವನ್ನು ಕುರಿತು ಹೇಳುತ್ತಾ ಅವರ ಈ ತ್ಯಾಗಕ್ಕೆ ಸಮಾನವಾದುದು ಯಾವುದೂ ಇಲ್ಲ ಎಂದರು. ಹಾಗೆಯೇ ಸೈನಿಕರನ್ನು ಪ್ರೋತ್ಸಾಹಿಸಿ ಅವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ಹೇಳಿದರು. 1930ರಲ್ಲಿ ತಾವು ಪ್ರಸಿದ್ಧಗೊಳಿಸಿದ್ದ ಮೂರು ದೇಶ ಭಕ್ತಿ ಗೀತೆಗಳನ್ನು ಹಾಡಿದರು. ಅವು 'ವೆಟ್ರಿ ಎತ್ತು ದಿಕ್ಕುಂ ಎಟ್ಟ', 'ಪಾರುಕ್ಕಲ್ಲೆ ನಲ್ಲ ನಾಡು' ಎಂಬ ಸುಬ್ರಹ್ಮಣ್ಯ ಭಾರತಿಯಾರರ ರಚನೆಗಳು ಹಾಗೂ 'ಶಾಂತಿ ನಿಲವ ವೆಂಡುಂ'.

ಪಟ್ಟಮ್ಮಾಳರು ಸದಾ ಕಾಲ ಒಂದು ವಜ್ರದ ನೆಕ್ಲೇಸನ್ನು ಧರಿಸುತ್ತಿದ್ದರು. ಅದು ಅವರಿಗೆ ತಂದೆ ನೀಡಿದ ಮದುವೆಯ ಉಡುಗೊರೆಯಾಗಿತ್ತು. ಒಮ್ಮೆ ರಾಜಾಜಿಯವರ ಭೇಟಿ ಆದಾಗ ರಾಜಾಜಿಯವರು ಪಟ್ಟಮ್ಮಾಳರಿಗೆ ಬೆಲೆ ಕಟ್ಟಲಾಗದ ಸಂಗೀತ ಪ್ರತಿಭೆ ಇರುವಾಗ ವಜ್ರದ ಆಭರಣ ಧರಿಸದಿದ್ದರೂ ಪರವಾಗಿಲ್ಲ ಎಂಬ ಮಾತನ್ನು ಹೇಳಿದರು. ಅಂದಿನಿಂದ ಆಕೆ ಅದನ್ನು ಧರಿಸಲಿಲ್ಲ.

ಸಂಗೀತಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟು ಸಂಗೀತವನ್ನೇ ಉಸಿರಾಡಿದ ಶಿಷ್ಯರ ಮೂಲಕ ಸಂಗೀತವನ್ನು ಬೆಳೆಸಿದ ಪಟ್ಟಮ್ಮಾಳರು 16ನೇ ಜುಲೈ 2009ರಂದು ಕಾಲನ ಕರೆಗೆ ಓಗೊಟ್ಟು ಇಹಲೋಕವನ್ನು ತ್ಯಜಿಸಿದರು. ಇದರೊಂದಿಗೆ ಸಂಗೀತದ ಒಂದು ಸುಂದರ ಲಹರಿ ಮುಕ್ತಾಯವಾಯಿತು. ■

# ಪರಾಮರ್ಶೆ


1. ಇಂದಿರಾ ಮೆನನ್, 'ಗ್ರೇಟ್ ಮಾಸ್ಟರ್ಸ್ ಆಫ್ ಕರ್ನಾಟಕ ಮ್ಯೂಸಿಕ್, 1930–1965', 2004, ಇಂಡಿಯಾ ಲಾಗ್ ಪಬ್ಲಿಕೇಷನ್ಸ್ ಪ್ರೈ., ಲಿ., ನವದೆಹಲಿ
2. ನಿರ್ಮಲಾ ರಾಮಸ್ವಾಮಿ, 'ಎನ್‌ಚಾಂಟಿಂಗ್ ಪರ್‌ಫಾರ್ಮರ್', ಡೆಕ್ಕನ್ ಹೆರಾಲ್ಡ್ ಪತ್ರಿಕೆ, 30–9–2000.
3. ಟಿ.ಎಸ್. ಪಾರ್ಥಸಾರಥಿ, 'ಸೋಲ್‌ಫುಲ್ ಮ್ಯೂಸಿಕ್', ಡಿ.ಕೆ.ಪಿ. 75–80, ಈಶ್ವರನ್, 28–3–1984.
4. ಎನ್. ರಾಜಗೋಪಾಲನ್, 'ಡಿ.ಕೆ. ಪಟ್ಟಮ್ಮಾಳ್–ಕಾನ್‌ಫ್ಲುಯೆನ್ಸ್ ಆಫ್ ಟ್ರೆಡಿಷನ್ ಅಂಡ್ ಗ್ರೇಸ್ ಇನ್ ಮ್ಯೂಸಿಕ್'.
5. ಗೌರಿ ರಾಮನಾರಾಯಣ, 'ಟ್ರೇಲ್ ಬ್ಲೇಜ಼ಿಂಗ್ ಟ್ರೆಡಿಷನಲಿಸ್ಟ್', ಶ್ರುತಿ, ಅಕ್ಟೋಬರ್ 1983
6. ವಿ. ಶ್ರೀರಾಮ್, 'ಎ ಸ್ಟಾರ್ ಈಸ್ ಬಾರ್ನ್', ಪತ್ರಿಕಾ ಲೇಖನ
7. ಲಕ್ಷ್ಮೀ ವೆಂಕಟರಾಮನ್, 'ಎ ಮ್ಯೂಸಿಕ್ ಮಾರ್ವೆಲ್', ದಿ ಹಿಂದೂ ಪತ್ರಿಕೆ, 19–3–2004
8. ಜ್ಯೋತಿ ಪಾಂಡೆ, ಡಿ.ಕೆ. ಪಟ್ಟಮ್ಮಾಳ್, ಐ ಪ್ರೇ ಥ್ರೂ ಮೈ ಸಿಂಗಿಂಗ್', ದಿ ಎಕನಾಮಿಕ್ ಟೈಮ್ಸ್, ಬೆಂಗಳೂರು, ಜುಲೈ 21, 1992
9. ವತ್ಸಲ ವೇದಾಂತಂ, 'ಡಿ.ಕೆ. ಪಟ್ಟಮ್ಮಾಳ್, ದಿ ರೆವಲ್ಯೂಷನರಿ', ದಿ ಹಿಂದೂ, 18–4–2003
10. ಅಲಂಕಾರ್ ಬಂಡೋಪಾಧ್ಯಾಯ, 'ಟ್ರೆಜ಼ರ್ಡ್ ಮೂಮೆಂಟ್ಸ್', ಪತ್ರಿಕಾ ಲೇಖನ, 30–12–2002
11. ಲಕ್ಷ್ಮೀ ದೇವನಾಥ್, 'ಡಿಗ್ನಿಟಿ ಪರ್‌ಸಾನಿಫೈಡ್', ದಿ ಹಿಂದೂ ಪತ್ರಿಕೆ
12. ಗೌರಿ ರಾಮನಾರಾಯಣ, 'ಮ್ಯೂಸಿಕ್ ಮಾರ್ಕ್‌ಡ್ ಬೈ ಸಿನ್ಸಿಯಾರಿಟಿ', ದಿ ಹಿಂದೂ, 5–2–1999

13. 'ಲಿಂಗರಿಂಗ್ ಇಂಪ್ರೆಷನ್ಸ್' ಲೇಖನ ದಿ ಹಿಂದೂ 12–4–1988
14. ಚಾರುಮತಿ ಸುಪ್ರಜಾ, 'ಮ್ಯೂಸಿಕಲ್ ಮೂಮೆಂಟ್ಸ್' ಪತ್ರಿಕಾ ಲೇಖನ
15. ಲಕ್ಷ್ಮೀ ರಾಮಕೃಷ್ಣನ್, 'ಮ್ಯೂಸಿಕ್ ವಿಥ್ ಫೀಲಿಂಗ್', ಫ್ರಂಟ್‌ಲೈನ್ ಪತ್ರಿಕೆ, ಸಂ.–15, ಸಂ.–8, ಏಪ್ರಿಲ್ 11–24, 1998.
16. ಎನ್. ಪಟ್ಟಾಭಿರಾಮನ್, 'ಒನ್ ಹಂಡ್ರೆಡ್ ತಮಿಳ್ಸ್–ಡಿ.ಕೆ. ಪಟ್ಟಮ್ಮಾಳ್', ದಿ ಹಿಂದೂ 27–3–1994
17. ಸಂದರ್ಶನ (ರವಿಕುಮಾರ್) ಡಿ.ಕೆ. ಪಟ್ಟಮ್ಮಾಳರೊಂದಿಗೆ ಫ್ರಂಟ್‌ಲೈನ್ ಪತ್ರಿಕೆ, 13–8–1999
18. ಕೆ.ಎಸ್. ಮುತ್ತುರಾಮನ್, 'ಎನ್‌ಡಿಯರಿಂಗ್ ಮ್ಯೂಸಿಕ್, ಎಂಡ್ಯೂರಿಂಗ್ ಮ್ಯೂಸಿಕ್', ಶ್ರುತಿ, ಅಕ್ಟೋಬರ್, 1983
19. ಎಕ್ಸ್‌ಪ್ರೆಸ್ ನ್ಯೂಸ್ ಸರ್ವೀಸ್, 'ಇಂಪಾರ್ಟೆನ್ಸ್ ಆಫ್ ಕರ್ನಾಟಿಕ್ ಮ್ಯೂಸಿಕ್ ಸ್ಟ್ರೆಸ್ಡ್', ಇಂಡಿಯನ್ ಎಕ್ಸ್‌ಪ್ರೆಸ್, ಕೊಯಮತ್ತೂರು ಪ್ರಕಟಣೆ, 14 ಸೆಪ್ಟೆಂಬರ್ 1995
20. ಸುಗಂಧಿ ಕೃಷ್ಣಕುಮಾರಿ, 'ಮ್ಯೂಸಿಂಗ್ಸ್ ಆಫ್ ಮ್ಯೂಸಿಕ್', ದಿ ಹಿಂದೂ, 14–2–2003.
21. ವಿ.ಕೆ. ಶ್ರೀನಿವಾಸನ್, 'ಎಕ್ಸ್‌ಪ್ರೆಸ್ಸಿಂಗ್ ಡಿವೋಷನ್ ಥ್ರೂ ಮೆಲೊಡೀಸ್', ಪತ್ರಿಕಾ ಲೇಖನ
22 'ರಿಪಾಸೆಟರಿ ಆಫ್ ರಿಚ್ ಕ್ಲಾಸಿಕಲ್ ಟ್ರೆಡಿಷನ್', ದಿ ಹಿಂದೂ, 8–5–1998
23. ಕೆ.ಎಸ್. ಮಹದೇವನ್, 'ಟ್ರಾಂಕ್ವಿಲ್ ಪವರ್' ಇಂಡಿಯನ್ ಎಕ್ಸ್‌ಪ್ರೆಸ್, 17–4–1987
24. ಲಕ್ಷ್ಮೀ ವೆಂಕಟರಾಮನ್, 'ಡಿ.ಕೆ. ಪಟ್ಟಮ್ಮಾಳ್–ಲೆಜೆಂಡರಿ ಟ್ಯಾಲೆಂಟ್' ದಿ ಹಿಂದೂ, 1–4–1994
25. ಸುಗಂಧಿ ಕೃಷ್ಣಮಾಚಾರಿ, 'ಪರ್‌ಫೆಕ್ಟ್ ಅಂಡ್ ಏಸ್ತಟಿಕ್', ದಿ ಹಿಂದೂ, 3–3–2007

■



# ಲೇಖಕರ ಕುರಿತು

**ಡಾ॥ ಎಸ್.ಸಿ. ಶರ್ಮ** ಅವರು ಶಿಕ್ಷಣ ತಜ್ಞರು, ಸಂಶೋಧಕರೂ ಆಗಿದ್ದು ಪ್ರಸ್ತುತ ದಯಾನಂದ ಸಾಗರ್ ವಿಶ್ವವಿದ್ಯಾಲಯದಲ್ಲಿ ಪ್ರೋವೋಸ್ಟ್ ಹಾಗೂ ದಯಾನಂದ ಸಾಗರ್ ತಾಂತ್ರಿಕ ಕಾಲೇಜಿನ ನಿರ್ದೇಶಕರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಈ ಹಿಂದೆ ಇವರು ತುಮಕೂರು ವಿಶ್ವವಿದ್ಯಾನಿಲಯ ಹಾಗೂ ಛತ್ತೀಸ್‌ಘರ್ ಸ್ವಾಮಿ ವಿವೇಕಾನಂದ ಟೆಕ್ನಿಕಲ್ ಯೂನಿವರ್ಸಿಟಿ, ಭಿಲೈ, ಛತ್ತೀಸ್‌ಘರ್, ಇದರ ಉಪಕುಲಪತಿಗಳಾಗಿಯೂ ಸಹ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ರಾಜ್ಯ ಯೋಜನಾ ಆಯೋಗದ ಸದಸ್ಯರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷರು ಮತ್ತು ಹಲವು ಸಂಘ-ಸಂಸ್ಥೆಗಳಲ್ಲಿ ವಿವಿಧ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಡಾ॥ ಶರ್ಮರವರು ಹಲವು ವಿಶ್ವವಿದ್ಯಾನಿಲಯಗಳ, ಅಂತಾರಾಷ್ಟ್ರೀಯ ಸಂಘ-ಸಂಸ್ಥೆಗಳ ಗೌರವಕ್ಕೆ ಭಾಜನರಾಗಿದ್ದಾರೆ. ಸದರಿಯವರಿಗೆ **'ರಾಜ್ಯೋತ್ಸವ ಪ್ರಶಸ್ತಿ'**ಯೂ ಸಹ ಸಂದಿರುತ್ತದೆ.

ಡಾ॥ ಶರ್ಮರವರು ಎಂಟು ವರ್ಷದ ಬಾಲಕರಾಗಿದ್ದಾಗ ಕರ್ನಾಟಕ ಸಂಗೀತ ಕಲಿಯಲು ಪ್ರಾರಂಭಿಸಿದರು. ದಿ॥ ಶ್ರೀರಾಮರಾವ್ ಹಾಗೂ ಸಂಗೀತ ವಿದುಷಿ ಶ್ರೀಮತಿ ಡಿ. ಶಶಿಕಲಾ ಅವರಿಂದ ಸಂಗೀತವನ್ನು ಮತ್ತು ದಿ॥ ಆರ್.ಆರ್. ಕೇಶವ ಮೂರ್ತಿ ಅವರಲ್ಲಿ ವಯೊಲಿನ್ ಅನ್ನು ಶ್ರೀಯುತರು ಅಭ್ಯಾಸ ಮಾಡಿದರು. ಕರ್ನಾಟಕ ಸಂಗೀತ ಅಕಾಡೆಮಿಯ ಸ್ಕಾಲರ್‌ಶಿಪ್ ಪಡೆದವರು. ಇಂದು ಹಾಡುಗಾರಿಕೆ ಹಾಗೂ ವಯೊಲಿನ್ ನುಡಿಸುವಲ್ಲಿ ಪ್ರಾವೀಣ್ಯತೆ ಪಡೆದು ಕಚೇರಿಗಳನ್ನು ನಡೆಸಿಕೊಡುತ್ತಾರೆ. ಆಲ್ ಇಂಡಿಯಾ

ರೇಡಿಯೊ ಕಾರ್ಯಕ್ರಮಗಳನ್ನು ಶ್ರೀಯುತರು ನೀಡಿದ್ದಾರೆ. ದೇಶ-ವಿದೇಶಗಳಿಂದ ಕರ್ನಾಟಕ ಸಂಗೀತದ ಪ್ರವಚನ, ಪ್ರಾತ್ಯಕ್ಷಿಕೆ ನೀಡಲು ಅವರನ್ನು ಆಹ್ವಾನಿಸಲಾಗುತ್ತದೆ. ಡಾ॥ ಶರ್ಮ ಅವರುತಮ್ಮ ವಿಜ್ಞಾನ-ತಂತ್ರಜ್ಞಾನದ ಪರಿಣತಿಯನ್ನು ಬಳಸಿ ಕರ್ನಾಟಕ ಸಂಗೀತದಲ್ಲಿ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಸಂಗೀತ ತಜ್ಞರಾಗಿ 'ಒತ್ತಡ ನಿವಾರಣೆ' ಯಲ್ಲಿ ಸಂಗೀತದ ಪಾತ್ರ ಕುರಿತ ಅಧ್ಯಯನವನ್ನು ನಡೆಸಿದ್ದಾರೆ. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿನ ಅವರ ಸಾಧನೆಗಳನ್ನು ಗುರುತಿಸಿ ಹಲವು ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. 1996-97ರಲ್ಲಿ ಕರ್ನಾಟಕ ಸರ್ಕಾರವು **'ಕರ್ನಾಟಕ ಕಲಾಶ್ರೀ'** ಪ್ರಶಸ್ತಿ ಹಾಗೂ ಕರ್ನಾಟಕ ಗಾನ ಕಲಾ ಪರಿಷತ್ತು **'ಗಾನಕಲಾಶ್ರೀ'** ಪ್ರಶಸ್ತಿಯನ್ನು ನೀಡಿರುತ್ತದೆ. ಬೆಂಗಳೂರಿನ ಗಾಯನ ಸಮಾಜವು **'ವರ್ಷದ ಕಲಾವಿದ 1999'** ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಗಾನ ಕಲಾ ಪರಿಷತ್ತಿನ ಉಪಾಧ್ಯಕ್ಷರಾಗಿ ಕರ್ನಾಟಕ ಸಂಗೀತದಪರಂಪರೆಯನ್ನು ಪಸರಿಸಿದ್ದಾರೆ. ಡಾ॥ ಎಸ್.ಸಿ. ಶರ್ಮರವರು ಸಂಗೀತದ ವಿಷಯದಲ್ಲಿ **'ಕರ್ನಾಟಕ ಸಂಗೀತಕ್ಕೆ ಡಿ.ಕೆ. ಪಟ್ಟಮ್ಮಾಳ್‌ರವರ ಕೊಡುಗೆಗಳು'** ಎಂಬ ಮಹಾಪ್ರಬಂಧವನ್ನು ರಚಿಸಿ ಅವಿನಾಶಿಲಿಂಗಂ ಮಹಿಳಾ ವಿಶ್ವವಿದ್ಯಾನಿಲಯ, ಕೊಯಂಬತ್ತೂರು, ಇಲ್ಲಿಂದ ಡಿ.ಲಿಟ್., ಪದವಿಯನ್ನು ಪಡೆದಿರುತ್ತಾರೆ.

ಡಾ॥ ಶರ್ಮ **'ಡಿ.ಕೆ. ಪಟ್ಟಮ್ಮಾಳರನ್ನು ತಮ್ಮ ಮಾನಸ ಗುರು'** ಎಂದು ಪರಿಗಣಿಸಿದ್ದಾರೆ. ಈ ವ್ಯಕ್ತಿ ಚಿತ್ರಣವು ಅವರಿಗೆ ಸಲ್ಲಿಸುವ ಗೌರವವೆಂದು, ಗುರು ಕಾಣಿಕೆಯೆಂದು ಭಾವಿಸುತ್ತಾರೆ.

■




ಸಭೆಯೊಂದರಲ್ಲಿ ಡಿ.ಕೆ. ಪಟ್ಟಮ್ಮಾಳ್ ಭಾಷಣ ಮಾಡುತ್ತಿರುವುದು



ಸಹೋದರ ಡಿ.ಕೆ. ಜಯರಾಮನ್‌ರೊಂದಿಗೆ ಡಿ.ಕೆ. ಪಟ್ಟಮ್ಮಾಳರ ಸಂಗೀತ ಅಭ್ಯಾಸ




1940ರ ಒಂದು ಸಂಗೀತ ಕಚೇರಿಯಲ್ಲಿ ನಿರತರಾದ ಡಿ.ಕೆ. ಪಟ್ಟಮ್ಮಾಳ್



நாடகத்தில் நடித்ததற்காக தங்
கப் பதக்கம் பரிசுபெற்ற காஞ்சீ
வரம் கவர்ன்மெண்ட் பாத்தி
யாலினி டயி.கி பாடசாலையைச்
சேர்ந்த ஸ்ரீமதி டி. கே. பட்டம்மாள்

ಯುವ
ಸಂಗೀತಜ್ಞರಾದ
ಡಿ.ಕೆ. ಪಟ್ಟಮ್ಮಾಳ್




ಸಂಗೀತ ಕಚೇರಿಯಲ್ಲಿ ತನ್ಮಯತೆಯಿಂದ ತಲ್ಲೀನರಾದ ಡಿ.ಕೆ. ಪಟ್ಟಮ್ಮಾಳರ ವಿವಿಧ ಚಿತ್ರಗಳು







ಸಂಗೀತ ಕಚೇರಿಯಲ್ಲಿ ತನ್ಮಯತೆಯಿಂದ ತಲ್ಲೀನರಾದ ಡಿ.ಕೆ. ಪಟ್ಟಮ್ಮಾಳರ ವಿವಿಧ ಚಿತ್ರಗಳು



**1940**ರ ದಶಕದಲ್ಲಿನ ಡಿ.ಕೆ. ಪಟ್ಟಮ್ಮಾಳರ ಚಿತ್ರ




ಸಮಾರಂಭವೊಂದರ ಉದ್ಘಾಟಿಸುತ್ತಿರುವ ಡಿ.ಕೆ. ಪಟ್ಟಮ್ಮಾಳ್



ಡಿ.ಕೆ. ಪಟ್ಟಮ್ಮಾಳರ ಕಲಾರಾಧನೆ



ದಿಗ್ಗಜರ ಸಮ್ಮಿಲನ–ಎಂ.ಎಸ್. ಸುಬ್ಬಲಕ್ಷ್ಮಿಯವರೊಂದಿಗೆ ಡಿ.ಕೆ. ಪಟ್ಟಮ್ಮಾಳ್





ಇಳಿ ವಯಸ್ಸಿನಲ್ಲೂ ಸಂಗೀತಾರಾಧನೆಯಲ್ಲಿ ಡಿ.ಕೆ. ಪಟ್ಟಮ್ಮಾಳ್



ಸಭೆಯೊಂದರಲ್ಲಿ ಆತ್ಮೀಯರೊಂದಿಗೆ ಡಿ.ಕೆ. ಪಟ್ಟಮ್ಮಾಳ್



ಶ್ರೀರಾಜಾಜಿಯವರೊಂದಿಗೆ ಡಿ.ಕೆ. ಪಟ್ಟಮ್ಮಾಳ್





ಪತಿ ಈಶ್ವರನ್‌ರೊಂದಿಗೆ ಡಿ.ಕೆ. ಪಟ್ಟಮ್ಮಾಳರ ಚಿತ್ರಗಳು



ಲೇಖಕರೊಂದಿಗೆ ದಿ॥ ಡಿ.ಕೆ. ಪಟ್ಟಮ್ಮಾಳ್ ಹಾಗೂ ಅವರ ಪತಿ ದಿ॥ ಶ್ರೀ ಈಶ್ವರನ್



"ನನ್ನ ಸುದೀರ್ಘ ಹಾಗೂ ಅವಿರತ ಸಂಗೀತದೊಂದಿನ ಪಯಣ ನನಗೆ ಸಾಕ್ಷಾತ್ಕಾರ ಹಾಗೂ ದೈವಾನುಭೂತಿ ಯನ್ನು ನೀಡಿದೆ, ನನ್ನ ಸಂಗೀತವನ್ನು ಆಸ್ವಾದಿಸುವ ಶ್ರೋತೃಗಳಿಲ್ಲದಿದ್ದಲ್ಲಿ ನಾನು ಸಹೃದಯ ಗೋಡೆ ಬಳಿ ಹಾಡಲು ಸಿದ್ಧನಿದ್ದೆ", ಈ ಮಾತುಗಳು ಇಂದಿಗೂ ನನ್ನ ಕಿವಿಗಳಲ್ಲಿ ಮಾರ್ದನಿಸುತ್ತಿದೆ, ನಾನು ಒಂಟಿ ಯಿದ್ದಾಗಲೆಲ್ಲಾ, ಧ್ಯಾನಾಸಕ್ತನಾಗಿದ್ದಾಗ ಅಥವಾ ನನ್ನ ಸಂಗೀತಾಭ್ಯಾಸದಲ್ಲಿ ನಿರತನಾಗಿದ್ದಾಗಲೆಲ್ಲಾ ಇಂದಿಗೂ ನನ್ನನ್ನು ಸತತವಾಗಿ ಕಾಡುವ ನೆನಪು. ಈ ಮಾತುಗಳು ಜ್ಞಾನ ಜಿಜ್ಞಾಸುವಾಗಿ ನನ್ನ 'ಮಾನಸ ಗುರು'ವನ್ನು ಆಕೆಯ ಕಡೆ ದಿನಗಳಲ್ಲಿ ಭೇಟಿಯಾದಾಗ ಹಂಚಿಕೊಂಡಾಗಿನ ಕ್ಷಣಗಳು.

ಕರ್ನಾಟಕ ಸಂಗೀತದ ತ್ರಿಮೂರ್ತಿಗಳ ಕೀರ್ತನೆಗಳನ್ನು, ಸುಬ್ರಹ್ಮಣ್ಯ ಭಾರತಿಯವರ ಕೃತಿಗಳನ್ನು ಅಮರಗೊಳಿಸಿದ ಆ ಸಿರಿ ಕಂಠಕ್ಕೆ ಶರಣು. ಸ್ವಾತಂತ್ರ್ಯ ಪೂರ್ವದ ಅಹಿಂಸಾತ್ಮಕ ಹೋರಾಟದ ದನಿಯಾದ, ರಾಷ್ಟ್ರದ ಅಂತಃಪ್ರಜ್ಞೆಯನ್ನು ಅಲುಗಾಡಿಸಿದ ಮಹಾತ್ಮ ಗಾಂಧೀಜಿಯ ಹತ್ಯೆಯ ಸಂದರ್ಭದಲ್ಲಿ ನೋವಿನ ದನಿಯಾದ, ಸ್ವಾತಂತ್ರ್ಯಾ ನಂತರ ನವ ಭಾರತದ ಪ್ರಜೆಗಳಿಗೆ ಪ್ರಥಮ ಲೋಕಸಭಾ ಚುನಾವಣೆ, ಮಹಿಳಾ ಸಬಲೀಕರಣ, ಮಾನವತೆಯ ಸಮತಾವಾದ, ಮುಂತಾದ ಸಾಮಾಜಿಕ ಕಳಕಳಿಯ ಅಪೂರ್ವ ಗಾಯಕಿಗೆ ನನ್ನ ನಮನ. ನನ್ನ ಮನ ಆವರಿಸಿದ್ದು ಆಕೆಯ ಸರಳತೆ, ಮಾನವೀಯತೆ ಹಾಗೂ ಸಾಮಾಜಿಕ ಕಳಕಳಿ. ಈ ವ್ಯಕ್ತಿತ್ವ ಆಕೆಯನ್ನು ಎಲ್ಲ ಎಲ್ಲೆಗಳನ್ನು ಮೀರಿ ಔನ್ನತ್ಯಕ್ಕೇರಿಸಿ ಅಜರಾಮರಗೊಳಿಸಿದೆ.

ಇದುವರೆವಿಗೂ ಎಷ್ಟೋ ಅಸಂಖ್ಯ ಲೇಖನಗಳು, ಕೃತಿಗಳು, ಬರಹಗಳು ಸಂಗೀತ ಕಲಾನಿಧಿ ಶ್ರೀಮತಿ ಡಿ.ಕೆ. ಪಟ್ಟಮ್ಮಾಳರ ಹೆಸರಿನಲ್ಲಿ ಹೊರ ಬಂದಿದೆ. ಸ್ವತಃ ನಾನೇ ಈ ಹಿಂದೆ ಇಂಗ್ಲೀಷ್ ಭಾಷೆಯಲ್ಲಿ ಆಕೆಯ ಜೀವನಗಾಥೆಯನ್ನು ರಚಿಸಿದ್ದೆ. ಈಗ ನನ್ನ ಮಾತೃ ಭಾಷೆ ಕನ್ನಡದಲ್ಲಿ ಈ ಅಕ್ಷರ ಪುಷ್ಪ ಆಕೆಯ ಸ್ಮರಣೆಯಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಮುಖೇನ ಲೋಕಾರ್ಪಣೆಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ.

ಡಾ|| ಎಸ್.ಸಿ. ಶರ್ಮ
ಲೇಖಕರು

ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು